ಅಖಿಲ ಕರ್ನಾಟಕ


# ಶಿಕ್ಷಕ ಸಮಾಚಾರ

ಅಕ್ಟೋಬರ್ 2017 ಮಾಸ ಪತ್ರಿಕೆ

ಸಂಪುಟ : 40
ಸಂಚಿಕೆ : 1
ಪುಟ : 12
ಬೆಲೆ : ₹ 10/–



## ಕನ್ನಡ ಬಳಸಿ ಬೆಳೆಸಿ ಉಳಿಸಿ




ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯಗಳು 3

ಕನ್ನಡ ಜಾಗೃತಿ ಮತ್ತು ಮಹಿಳೆ 5

A Journal of Karnataka State Secondary Teachers' Association

# ಸಂಪಾದಕೀಯ

ಶಿಕ್ಷಕ ಸಮಾಚಾರದ ಓದುಗರಿಗೆ, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ 61ನೆಯ ರಾಜ್ಯೋತ್ಸವದ ಶುಭಾಶಯಗಳು.

1956ರಲ್ಲಿ ಕರ್ನಾಟಕ ಏಕೀಕರಣವಾದಾಗ 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂದು ಕವಿವಾಣಿಯೊಂದು ನುಡಿಯಿತು. ಅಂದಿನಿಂದ ಇಂದಿನವರೆಗೂ ಈ ಆಶಯ ಹಾಗೆಯೇ ಉಳಿದಿರುವುದು ಕಹಿ ಸತ್ಯ. ಕನ್ನಡವನ್ನು ಉಸಿರಾಗಿಸಲು ನಾಡಿನ ಜನತೆ ಮನಸ್ಸು ಮಾಡಬೇಕು. ಕನ್ನಡ ಭುವನೇಶ್ವರಿಯೇ ಜನರಿಗೆ ಭಾಷಾಭಿಮಾನದ ಪ್ರೇರಣೆಯನ್ನು ಮೂಡಿಸಬೇಕು. ಜನತೆಗೆ ಭಾಷಾಭಿಮಾನವನ್ನು ಕನ್ನಡಾಂಬೆ ಬೇಗ ಮೂಡಿಸಲಿ ಎಂದು ಆಶಿಸೋಣ.

'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು', ಮಕ್ಕಳೇ ಮನೆಗೆ ಮಾಣಿಕ್ಯ' ಮುಂತಾದ ಹೇಳಿಕೆಗಳು ಸಮಾಜ ಹಾಗೂ ದೇಶದಲ್ಲಿ ಮಕ್ಕಳ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಅಂತಹ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ, ಸಮಾಜದ ಹಿತವನ್ನು ಕಾಪಾಡುವ, ದೇಶದ ಅಭಿವೃದ್ಧಿಗೆ ನೆರವಾಗುವಂತಹ ಮಕ್ಕಳನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಹಾಗೂ ಶಿಕ್ಷಕರ ಪಾತ್ರ, ಜವಾಬ್ದಾರಿ ಬಹಳ ದೊಡ್ಡದು. ನಿಷ್ಕಲ್ಮಷ ಮನಸ್ಸಿನ ಮುಗ್ಧಮಕ್ಕಳನ್ನು ಕಂಡರೆ ಎಲ್ಲರಿಗೂ ಅಕ್ಕರೆಯೇ. ಅವರನ್ನು ಸಮಾಜಮುಖಿಗಳನ್ನಾಗಿಸುವಲ್ಲಿನ ಹಿರಿಯರ ಜವಾಬ್ದಾರಿಯನ್ನು ನೆನಪಿಸುವ ಸಲುವಾಗಿಯೇ ಬಹುಶಃ ಪಂಡಿತ್ ಜವಹರಲಾಲ್ ನೆಹರೂರವರು ತಮ್ಮ ಹುಟ್ಟುಹಬ್ಬವನ್ನು 'ಮಕ್ಕಳ ದಿನಾಚರಣೆ'ಯಾಗಿ ಆಚರಿಸುವಂತೆ ಕರೆನೀಡಿ ಆ ದಿನಾಚರಣೆಗೆ ಪ್ರಾಮುಖ್ಯತೆಯನ್ನು ನೀಡಿದಂತೆ ಕಾಣುತ್ತದೆ. ನವೆಂಬರ್ 14ರ ಮಕ್ಕಳ ದಿನಾಚರಣೆ ಹಾಗೂ ನವೆಂಬರ್ 20ರ 'ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆ'ಯ ಸಂದರ್ಭದಲ್ಲಿ ಎಲ್ಲಾ ಮಕ್ಕಳಿಗೂ ಶುಭಾಶಯವನ್ನು ಕೋರುತ್ತಾ, ಮುಂದಿನ ಪ್ರಜೆಗಳಾದ ಇಂದಿನ ಮಕ್ಕಳಿಂದ ಸುಖೀಸಮಾಜವನ್ನು ನಿರೀಕ್ಷಿಸೋಣ.

ಕ್ರಿ.ಶ. 15ನೆಯ ಶತಮಾನದಲ್ಲಿ ಜನಮನದಲ್ಲಿ ಗಾಢವಾದ ಪ್ರಭಾವ ಬೀರಿದ ವಿಶಿಷ್ಟವಾದ ಸಾಹಿತ್ಯ ಪ್ರಕಾರ 'ದಾಸ ಸಾಹಿತ್ಯ'. ಭಕ್ತಿ ಪ್ರತಿಪಾದನೆಯೇ ಪ್ರಧಾನವಾಗಿದ್ದರೂ, ಸಮಾಜವನ್ನು ತಿದ್ದುವ ಕೆಲಸವನ್ನು ನಿರ್ಭೀತಿಯಿಂದ, ಅಚ್ಚುಕಟ್ಟಾಗಿ ಕೀರ್ತನೆಗಳ ಮೂಲಕ ದಾಸರುಗಳು ಮಾಡಿದರು. ಆ ಮೂಲಕ ಕನ್ನಡ ಸಾಹಿತ್ಯಕ್ಕೆ ದಾಸ ಸಾಹಿತ್ಯ ವಿಶಿಷ್ಟ ಕಾಣಿಕೆಯನ್ನು ನೀಡಿದೆ. ಇಂತಹ ಶ್ರೇಷ್ಠ ದಾಸ ಸಾಹಿತ್ಯದ ಎರಡು ಕಣ್ಣುಗಳು ಪುರಂದರದಾಸರು ಮತ್ತು ಕನಕದಾಸರು ಎಂದರೆ ತಪ್ಪಾಗಲಾರದು. ಕನಕದಾಸರದು ನಿಷ್ಕಲ್ಮಷ, ನೈಜ ಭಕ್ತಿ. ಸ್ವತಃ ಗುರುಗಳಾದ ವ್ಯಾಸರಾಯರೇ ಕನಕನ ಭಕ್ತಿಗೆ ತಲೆದೂಗಿದರು. ಇಂತಹ ಶ್ರೇಷ್ಠ ಭಕ್ತ ಕನಕರು ಕೀರ್ತನೆಗಳಷ್ಟನ್ನೇ ಅಲ್ಲದೆ ಶ್ರೇಷ್ಠ ಕಾವ್ಯಗಳನ್ನೂ ರಚಿಸಿದ್ದಾರೆ. 'ಮೋಹನ ತರಂಗಿಣಿ', ರಾಮಧಾನ್ಯ ಚರಿತೆ', 'ನಳ ಚರಿತ್ರೆ' ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಗಳು. ಈ ಸಂತ, ಕವಿ ಕನಕದಾಸರ ಜಯಂತಿ ನವೆಂಬರ್ 6ರಂದು. ಈ ಸಂದರ್ಭದಲ್ಲಿ ಕನಕರ ಕೀರ್ತನೆಗಳನ್ನು, ವಿಚಾರಗಳನ್ನು ಮೆಲುಕು ಹಾಕುವುದು ನಾವು ಅವರಿಗೆ ತೋರಿಸುವ ಗೌರವವೆಂದೆನಿಸುತ್ತದೆ.

ಕನ್ನಡ ಸಾಹಿತ್ಯವನ್ನು ತಮ್ಮ ವಿದ್ವತ್ತು, ಪ್ರತಿಭೆಗಳಿಂದ ಶ್ರೀಮಂತಗೊಳಿಸಿದ ಮಹನೀಯರು ಅನೇಕರು. ಅವರಲ್ಲಿ ಪ್ರಾತಃ ಸ್ಮರಣೀಯರು ಕೆಲವರು. 'ಚಲಿಸುವ ನಿಘಂಟು'ಎಂದೇ ಖ್ಯಾತರಾಗಿದ್ದ ಡಾ. ಡಿ.ಎಲ್. ನರಸಿಂಹಾಚಾರ್ಯರು 'ಶಬ್ದಮಣಿದರ್ಪಣ', 'ಗ್ರಂಥಸಂಪಾದನೆಯಂತಹ ಶಾಸ್ತ್ರಗ್ರಂಥಗಳನ್ನು ಸಂಪಾದಿಸುವುದರೊಂದಿಗೆ 'ಪಂಪಭಾರತ' ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದರು. 'ಪಂಪಭಾರತ ದೀಪಿಕೆ'ಯನ್ನೂ ರಚಿಸಿದರು. ಟಿ. ಎಸ್. ವೆಂಕಣ್ಣಯ್ಯನವರು ಹಲವಾರು ಪ್ರಾಚೀನ ಗ್ರಂಥಗಳನ್ನು ಸಂಪಾದಿಸುವುದರೊಂದಿಗೆ ಅವುಗಳಿಗೆ ಉತ್ತಮ ಮುನ್ನುಡಿಗಳನ್ನು ಬರೆದಿದಾರೆ. ಕೇವಲ ಇಂಟರ್‌ಮಿಡಿಯೆಟ್‌ವರೆಗೆ ವಿದ್ಯಾಭ್ಯಾಸ ಮಾಡಿದರೂ ಜ್ಞಾನಪೀಠ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ, ಅಪಾರವಾದ ವಿದ್ವತ್ತಿನ ಪ್ರತಿಭೆ ಡಾ. ಶಿವರಾಮ ಕಾರಂತರದು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ನಿಘಂಟು, ವಿಶ್ವಕೋಶ ರಚನೆ, ಕಾದಂಬರಿ, ಚಿತ್ರಕಲೆ, ಯಕ್ಷಗಾನ. . . ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೈಯಾಡಿಸಿ ಸಾಹಿತ್ಯ ಕ್ಷೇತ್ರಕ್ಕೆ ಶಾಶ್ವತ ಕೊಡುಗೆ ನೀಡಿದವರು ಕಾರಂತರು. ಅಂತೆಯೆ ವಚನ ಸಾಹಿತ್ಯದಲ್ಲಿ ಅಪಾರ ಸಂಶೋಧನೆ ಮಾಡಿದ ವಿದ್ವಾಂಸರುಗಳು ಡಾ. ಎಲ್. ಬಸವರಾಜು ಮತ್ತು ಚನ್ನಪ್ಪ ಉತ್ತಂಗಿ. ಕಾದಂಬರಿ ಲೋಕದಲ್ಲಿ ಮರೆಯಲಾಗದ ಹೆಸರು ಕೆರೂರು ವಾಸುದೇವಾಚಾರ್ಯರು ಹಾಗೂ ಬಸವರಾಜ ಕಟ್ಟೀಮನಿ. ಈ ಎಲ್ಲಾ ಮಹನೀಯರು ಜನಿಸಿದ್ದು ಅಕ್ಟೋಬರ್ ತಿಂಗಳಲ್ಲಿ. ಅಂತೆಯೇ ಡಿ. ವಿ. ಜಿ., ಬೇಂದ್ರೆ, ಪುತಿನ, ಶ್ರೀರಂಗ, ತಿ.ತಾ. ಶರ್ಮ, ದೇವುಡು, ಪಂಜೆ ಮಂಗೇಶರಾಯರು , ಆನಂದಕಂದ ಮುಂತಾದ ಮಹನೀಯರು ಮರಣಿಸಿದ್ದು ಈ ತಿಂಗಳಿನಲ್ಲಿ. ಈ ಎಲ್ಲಾ ಸಾಧಕರಿಗೂ ನಮ್ಮ ನಮನಗಳು.

ಸಂಪಾದಕರು

## ಸೂಕ್ತಿ



ಶತ್ರೋರಪಿ ಗುಣಾ ಗ್ರಾಹ್ಯಾ
ದೋಷಾ ವಾಚ್ಯಾ ಗುರೋರಪಿ ।
ಸರ್ವಥಾ ಸರ್ವಯತ್ನೇನ ಪುತ್ರೇ
ಶಿಷ್ಯೇ ಹಿತಂ ವದೇತ್ ॥

ಸದ್ಗುಣಗಳು ಸದಾ ಮಾನ್ಯವೇ ಆಗಿರುತ್ತವೆ. ಆದ್ದರಿಂದ ಸದ್ಗುಣವು ಪರಮವೈರಿಯಲ್ಲಿದ್ದರೂ ಸ್ವೀಕರಿಸಬೇಕು. ಹಾಗೆಯೇ ದೋಷಗಳು ಸರ್ವದಾ ಅಗ್ರಾಹ್ಯ. ದೋಷಗಳು ಯಾರಲ್ಲಿಯೇ ಇದ್ದರೂ ಅದು ಅನಾವರಣವಾಗಲೇಬೇಕು. ವಿದ್ಯೆ ಕೊಟ್ಟ ಗುರುಗಳೂ ಇದಕ್ಕೆ ಹೊರತಾಗಿಲ್ಲ. ಸಹನೀಯ ದೋಷಗಳನ್ನು ಆಪ್ತವಲಯದಲ್ಲಿ ತೋರಿಸಿ ಗುರುಗಳಿಗೆ ಮನವರಿಕೆ ಮಾಡಬೇಕು. ಆದರೆ ಅಸಹನೀಯ ದೋಷಗಳು ಜನಸ್ಥಾನದಲ್ಲಿಯೇ ಬಹಿರಂಗವಾಗಬೇಕು. ಪುತ್ರನ ಹಾಗೂ ಶಿಷ್ಯನ ಅಭ್ಯುದಯಕ್ಕಾಗಿ ಜನಕನು ಮತ್ತು ಗುರುವು ಸದಾ ಹಿತವಚನ ಹೇಳುತ್ತಿರಬೇಕು.

- ಅಶ್ವತ್ಥಾಮಾಚಾರ್ಯ ವಚನ

ಸಂಗ್ರಹ, ವ್ಯಾಖ್ಯಾನ : ಪಂಡಿತ ಸಮೀರಾಚಾರ್ಯ ಕಂಠಪಲ್ಲೀ

b d

## ಪರಿವಿಡಿ


- ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯಗಳು 3
- ಭಾಷಾ ಕಲಿಕೆಯ ಪರಿಕಲ್ಪನೆ 4
- ಕನ್ನಡ ಜಾಗೃತಿ ಮತ್ತು ಮಹಿಳೆ 5
- ಮನವಿ 7
- ಮಕ್ಕಳ ದಿನಾಚರಣೆ 8
- ಗಾಂಧೀಜಿ ಕಂಡ ಭಾರತಮಾತೆ 11

# ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯಗಳು



**ಡಾ. ವೆಂಕಟರಮಣ ದೇವರು ಭಟ್ಟ**
ಸಂಸ್ಕೃತ ಅಧ್ಯಾಪಕರು
ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು,
ಹಳೇವಾಣಿವಿಲಾಸ, ಬೆಂಗಳೂರು

ನಮ್ಮ ನಾಡು ಪ್ರಾಚೀನ ಕಾಲದಿಂದಲೂ ಋಷಿ-ಮುನಿಗಳ, ಸಾಧು-ಸಂತರ ನೆಲೆವೀಡು. ಕನಕದಾಸರು ಸಂತರು, ಹರಿದಾಸರು ಮತ್ತು ಕವಿಗಳು. ಈ ನಾಡಿನ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳ ಉನ್ನತಿಗೆ ಇವರ ಕೊಡುಗೆ ಅನುಪಮವಾದದ್ದು. ಇವರು ತಮ್ಮ ಕೀರ್ತನೆಗಳಲ್ಲಿ ಅನನ್ಯ ಭಕ್ತಿಯಿಂದ ಭಗವಂತನನ್ನು ಕೊಂಡಾಡಿ ದಾಸಶ್ರೇಷ್ಠರೆಂದು ಕರೆಯಿಸಿಕೊಂಡರು. ಅಲ್ಲದೆ ಅವರು ಹರಿಭಕ್ತಿಸಾರ, ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯಚರಿತೆಗಳಂತಹ ಉತ್ತಮ ಕೃತಿಗಳನ್ನು ರಚಿಸಿ ಕವಿಶ್ರೇಷ್ಠರೆಂದು ಪ್ರಸಿದ್ಧರಾದರು. ಹುಟ್ಟಿನಿಂದ ಕೆಳವರ್ಗಕ್ಕೆ ಸೇರಿದ ಕನಕದಾಸರು ತಮ್ಮ ವಿಶಿಷ್ಟಗುಣಗಳಿಂದ, ಭಕ್ತಿ ವೈರಾಗ್ಯ ಕಾವ್ಯರಚನೆಯಿಂದ ವ್ಯಾಸರಾಯರ ಪ್ರಿಯಶಿಷ್ಯರಲ್ಲಿ ಒಬ್ಬರಾಗುವ ಯೋಗ್ಯತೆಯನ್ನು ಗಳಿಸಿಕೊಂಡು ದಾಸವರೇಣ್ಯರೆಂಬ ಗೌರವಕ್ಕೆ ಪತ್ರರಾದರು.

ಕನಕದಾಸರು ಜನಿಸಿದ್ದು ಬಾಡ ಎಂಬ ಗ್ರಾಮದಲ್ಲಿ. ನೆಲೆಸಿದ್ದು ಕಾಗಿನೆಲೆಯಲ್ಲಿ. ಆದಿಕೇಶವನ ಅಂಕಿತ. ಕುರುಬ ಜನಾಂಗಕ್ಕೆ ಸೇರಿದ ಇವರ ತಂದೆ ತಾಯಿ ಬೀರಪ್ಪ ಹಾಗೂ ಬಚ್ಚಮ್ಮ ವಿಭೂತಿಧರಿಸಿ ಶೈವಧರ್ಮವನ್ನು ಅನುಸರಿದರೂ ತಿರುಪತಿ ತಿಮ್ಮಪ್ಪನಲ್ಲಿ ಅಪಾರ ಭಕ್ತಿ. ತಿಮ್ಮಪ್ಪ ನಾಯಕನೆಂದೇ ಮಗನಿಗೆ ಹೆಸರಿಟ್ಟಿದ್ದರು.

ತಿಮ್ಮಪ್ಪ ನಾಯಕ ಕನಕನಾಯಕನಾದದ್ದು ಪವಾಡದ ರೀತಿಯಲ್ಲಿ. ತಮ್ಮ ಜೀವಿತದಲ್ಲಿಯೇ ವಿಜಯನಗರ ಸಾಮ್ರಾಜ್ಯದ ಏಳು-ಬೀಳುಗಳನ್ನು ಕಂಡವರು ಇವರು. ಕನಕದಾಸರು ಸ್ವತಃ ಪಾಳೆಯಗಾರನಾಗಿ ಧನಸಂಪತ್ತನ್ನು, ವೈಭವವನ್ನು, ಅಧಿಕಾರವನ್ನು ಅನುಭವಿಸಿದರು. ಆದರೆ ನಂತರದ ತಮ್ಮ ಜೀವನದಲ್ಲಿ ಇವುಗಳ ನಿಷ್ಪ್ರಯೋಜಕತೆಯನ್ನೂ, ಅನಿತ್ಯತೆಯನ್ನೂ ಮನಗಂಡು ಹರಿಗೆ ಶರಣಾಗಿ ಹರಿದಾಸರಾದರು.

ಕನಕದಾಸರ ಕೀರ್ತನೆಗಳು ಭಾವಪೂರ್ಣವಾಗಿವೆ. ಈ ಕೀರ್ತನೆಗಳ ಮೂಲಕ ಭಗವಂತನಲ್ಲಿ ಭಕ್ತಿಯನ್ನು ಸಾರುವುದರ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಕೆಲವು ಅಸಾಂಪ್ರದಾಯಿಕ ಆಚರಣೆಗಳನ್ನು ಒರೆಗಲ್ಲಿಗೆ ಹಚ್ಚಿ ಪ್ರಶ್ನಿಸಿದ್ದಾರೆ. ಸ್ವಸ್ಥಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿಯ ಅವಶ್ಯಕತೆ ಇದೆ. ಅದು ಭಗವದ್ಭಕ್ತಿಯಿಂದ ಲಭಿಸುವುದು. ನಾಸ್ತಿಕತೆಯು ಮನುಷ್ಯನಲ್ಲಿ ತಲ್ಲಣವನ್ನು, ನಿರಾಸೆಯನ್ನು, ಭ್ರಮೆಯನ್ನು, ಹತಾಶೆಯನ್ನು ಉಂಟು ಮಾಡುತ್ತದೆ. ದೇವರಲ್ಲಿ ಅನನ್ಯ ಭಕ್ತಿಯನ್ನು ಸಾರುವ- **'ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ',** ಮಂತಾದ ಅನೇಕ ಕೀರ್ತನೆಗಳನ್ನು ಕಾಣಬಹುದು. ಆದರೆ ಡಾಂಬಿಕ ಭಕ್ತಿಯನ್ನು ಅವರು ಎಂದೂ ಒಪ್ಪುತ್ತಿರಲಿಲ್ಲ. **'ಜಪವಮಾಡಿದರೇನು ತಪವಮಾಡಿದರೇನು, ವಿಪರೀತ ಕಪಟಗುಣಕಲುಷವಿದ್ದವರು'** ಎಂದು ದೂಷಿಸಿದ್ದಾರೆ.

ಕನಕದಾಸರು ಸಮಾಜದ ಒಳಿತಿಗೆ ಧರ್ಮಾಚರಣೆಯ ಅಗತ್ಯತೆಯನ್ನು ಒತ್ತಿಹೇಳಿದ್ದಾರೆ. ಸಮಾಜದಲ್ಲಿ ಸತ್ಯ, ಧರ್ಮಗಳು ಮಾಯವಾಗುತ್ತಿರುವುದನ್ನು ನೋಡಿ ಮರುಗಿದ್ದಾರೆ:

**ಧರ್ಮವಿಲ್ಲದ ಅರಸು ಮುರಿದಕಾಲಿನ ಹೊರಸು**
**ನಿರ್ಮಲವಿಲ್ಲದ ಮನಸು ಅದು ಕಜ್ಜಿ ತಿನಿಸು.**

**ಸತ್ಯಧರ್ಮಗಳೆಲ್ಲ ಎತ್ತ ಪೋದವೊ ಕಾಣೆ**
**ಉತ್ತಮರ ಜೀವನಕೆ ದಾರಿಯಿಲ್ಲ**

**ನಿತ್ಯದಲಿ ಕಳವು ವ್ಯಭಿಚಾರವುಳ್ಳವರೆಲ್ಲ**
**ಅರ್ಥಸಂಪದರಾಗಿ ಅನುಭವಿಸುತಿಹರು.**

ಹುಟ್ಟಿದ ಕುಲ ಮುಖ್ಯವಲ್ಲ ಗುಣಮುಖ್ಯ. ಉತ್ತಮ ಗುಣಗಳಿದ್ದರೆ ದೇವರು ಅಂಥವರ ಉದ್ಧಾರ ಮಾಡುತ್ತಾನೆ ಎಂಬುದನ್ನು ಸ್ವ ಅನುಭವದ ಮೂಲಕ ಜಗತ್ತಿಗೆ ತೋರಿಸಿಕೊಟ್ಟ ಮಹಾಮಹಿಮರು ಕನಕದಾಸರು. ಅದನ್ನು ಮಾರ್ಮಿಕವಾಗಿ ನಮ್ಮನ್ನು ಎಚ್ಚರಿಸಿದ ಪರಿಯಿದು.

**ಕುಲಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ**
**ಕುಲದ ನೆಲೆಯನೇನಾದರೂ ಬಲ್ಲಿರಾ?**

**ಕುಲಕುಲ ಕುಲವೆನ್ನುತಿಹರೋ**
**ಕುಲವಾವುದು ಸತ್ಯ ಸುಜನರಿಗೆ**

ಮೋಸದ ಜೀವನವನ್ನು, ಅನ್ಯಾಯದ ಜೀವನವನ್ನು ಕನಕದಾಸರು ಒಪ್ಪಿದವರಲ್ಲ. ಅಂತಹ ಜೀವನ ಅವನನ್ನೇ ನಾಶ ಮಾಡುತ್ತದೆ ಎಂದು ವಿಡಂಬನೆ ಮಾಡಿದ್ದಾರೆ:

**ಮೋಸದಿ ಜೀವರ ಘಾಸಿ ಮಾಡಿದ ಪಾಪ**
**ಕಾಶಿಗೆ ಹೋದರೆ ಹೋದೀತೆ**

ಪುಟ 10 ಕ್ಕೆ ➤

ಶಿಕ್ಷಣ ಸೌರಭ

# ಭಾಷಾ ಕಲಿಕೆಯ ಪರಿಕಲ್ಪನೆ

**ವಿ. ರಾಜ**
**ಶಿಕ್ಷಣ ಪ್ರಕೋಷ್ಠ ಪ್ರಮುಖ್**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**



ಹುಟ್ಟಿದಾಗಿನಿಂದ ಮಗು ತನ್ನ ಸುತ್ತಲಿನ ಪ್ರಪಂಚವನ್ನು ಅರಿಯಲು ಪ್ರಮುಖವಾಗಿ ಅವಲಂಬಿಸೋದು ಅನುಕರಣಾ ವಿಧಾನವನ್ನು. ತನ್ನ ತಾಯ್ತಂದೆಯರನ್ನು, ಸುತ್ತಲಿನ ಸಮಾಜವನ್ನು ಅರ್ಥ ಮಾಡ್ಕೊಳ್ಳೋಕೆ ಮುಖ್ಯ ಸಾಧನ ಭಾಷೆ. ಭಾಷಾ ವಿಜ್ಞಾನಿಗಳ ಅಧ್ಯಯನದಂತೆ ಪ್ರತಿ ಮಗುವೂ ತಾನು ಮೊದಲು ತೆರೆದು ಕೊಳ್ಳುವ ನುಡಿಯ ಸ್ವಭಾವ, ವ್ಯಾಕರಣ, ಬಳಕೆ ಮಾಡೋ ರೀತಿ, ಸೊಗಡನ್ನು ಮೊದಲ ಆರು ವರ್ಷಗಳಲ್ಲಿ ಅತಿ ಸಹಜವಾಗಿ ಕಲಿಯುತ್ತದೆ. ಇನ್ನೆಲ್ಲಾ ಭಾಷಾ ಕಲಿಕೆಯನ್ನೂ ಆ ಅಡಿಪಾಯದ ಅನುಭವದ ಮೇಲೇ ಕಲಿಯುತ್ತವೆ. ಬಾಲ್ಯದಲ್ಲಿ ತಾಯ್ನುಡಿಗೆ ತೆರೆದುಕೊಳ್ಳುವುದರಿಂದಾಗಿ ಪ್ರಪಂಚವನ್ನು ಅರಿಯಲು ಮನುಷ್ಯನಿಗೆ ಇರುವ ಅತ್ಯುತ್ತಮ ಸಾಧನವೆಂದರೆ ತಾಯ್ನುಡಿಯೇ ಆಗಿದೆ. ಹೀಗಾಗಿ ವಿಷಯವನ್ನು ಅರ್ಥ ಮಾಡಿಕೊಳ್ಳುವಿಕೆ, ಯೋಚಿಸುವಿಕೆ ಎಲ್ಲವೂ ಆ ಮೊದಲು ಕಲಿಯುವ ಭಾಷೆಯಲ್ಲಿರುವುದು ಸಹಜವಾಗುತ್ತದೆ. ಆ ಕಲಿಕೆ ಬರುವುದು ಹೇಳಿಕೊಡುವುದರಿಂದಲ್ಲ, ಗಮನಿಸುವುದರಿಂದ, ಸುತ್ತಲಿನ ಪರಿಸರದಿಂದ. ಹಾಗಾಗಿ ಕನ್ನಡಿಗರ ಕಲಿಕೆ ಕನ್ನಡದಿಂದಲೇ ಅತ್ಯುತ್ತಮವಾಗಲು ಸಾಧ್ಯ. ಕಲಿಕೆ ಅತ್ಯುತ್ತಮವಾಗುವುದು ಎನ್ನುವುದರ ಅರ್ಥ ಕಲಿಯುವ ವಿಷಯದ ಬಗ್ಗೆ ಆಳವಾದ ಅರಿವು, ವಿಷಯ ಅರ್ಥವಾಗುವುದು. ಮಕ್ಕಳು ಶಾಲೆ ಸೇರುವ ಹೊತ್ತಿಗಾಗಲೇ ಈ ತಾಯ್ನುಡಿಯ ಅಡಿಪಾಯ ಬಿದ್ದಿರುವುದರಿಂದ ಶಾಲಾ ಕಲಿಕೆ ತಾಯ್ನುಡಿಯಲ್ಲಿರುವುದು ಸರಿಯಾದದ್ದು ಎನ್ನುವುದು ಭಾಷಾ ವಿಜ್ಞಾನಿಗಳ ಅನಿಸಿಕೆ.

ಭಾರತದ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕದಲ್ಲಿನ ಕಲಿಕೆಯ ಮಾಧ್ಯಮದ ಬಗ್ಗೆ ಒಂದು ತೀರ್ಪನ್ನು ನೀಡಿದೆ. ಕಲಿಕೆಯ ಮಾಧ್ಯಮವನ್ನು ತೀರ್ಮಾನಿಸುವ ಹಕ್ಕು ಮಗುವಿನ ತಾಯಿ-ತಂದೆಯರದ್ದೇ ಹೊರತು ರಾಜ್ಯಸರ್ಕಾರದ್ದಲ್ಲಾ ಎಂದಿದೆ ಕೋರ್ಟು. ಇದು ಜನರ ಆಯ್ಕೆ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ತೀರ್ಪು ಎನ್ನುವ ದೃಷ್ಟಿಯಿಂದ ನೋಡಿದರೆ ಸರಿಯೆನ್ನಿಸುತ್ತದೆ. ಆದರೆ 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ನಮ್ಮ ನಾಡಿನ ಕಲಿಕೆಯ ಏರ್ಪಾಟನ್ನು ತೀರ್ಮಾನಿಸುವ ಹಕ್ಕು ನಮ್ಮ ರಾಜ್ಯಸರ್ಕಾರಕ್ಕೆ ಇಲ್ಲಾ' ಎನ್ನುವುದನ್ನು ಕಂಡಾಗ ಈ ತೀರ್ಪು ಸರಿಯೇ ಎಂಬ ಅನುಮಾನ ಮೂಡುತ್ತದೆ. ಇಷ್ಟಕ್ಕೂ ಈ 'ಕಲಿಕೆಯ ಮಾಧ್ಯಮದ ಪ್ರಶ್ನೆ' ಕೋರ್ಟಿನ ಮುಂದೆ ಹೋದದ್ದೇ ಬೇರೆಯ ಕಾರಣದಿಂದಾಗಿ ಎನ್ನುವುದರ ಜೊತೆಗೇ ಸದರಿ ತೀರ್ಪಿನ ಬೆಂಬಲಕ್ಕೆ ಯಾವುದೇ ವೈಜ್ಞಾನಿಕ ಅಧ್ಯಯನದ ತಳಹದಿ ಇಲ್ಲದಿರುವನ್ನು ಕಂಡಾಗ ಈ ತೀರ್ಪು ಸರಿಯಿಲ್ಲಾ ಎನ್ನಿಸಿದರೆ ಅಚ್ಚರಿಯಿಲ್ಲ. ಒಟ್ಟಾರೆ ಇದಕ್ಕೆ ಹಲವಾರು ಆಯಾಮಗಳಿದ್ದು ಯೋಚಿಸಬೇಕಾದ ವಿಷಯವಾಗಿದೆ.

'ತನ್ನ ನಾಡಿನ ಮಕ್ಕಳು ಏನನ್ನು ಕಲಿಯಬೇಕೆಂಬುದನ್ನು ತೀರ್ಮಾನಿಸುವ ಹೊಣೆ ಒಂದು ನಾಡಿನ ಸರ್ಕಾರಕ್ಕೆ ಇರುವುದಿಲ್ಲವೇ? ತನ್ನ ನಾಡಿನ ಶಾಲೆಗಳಲ್ಲಿ ಏನನ್ನು ಕಲಿಸಬೇಕೆನ್ನುವುದನ್ನು ತೀರ್ಮಾನಿಸುವ ಹೊಣೆ ಅಲ್ಲಿನ ಸರ್ಕಾರದ್ದಲ್ಲವೇ? ತನ್ನ ನಾಡಲ್ಲಿ ಯಾವ ಕಲಿಕೆಯ ಮಾಧ್ಯಮವಿರಬೇಕು ಎನ್ನುವುದನ್ನು ತೀರ್ಮಾನಿಸುವ ಹಕ್ಕನ್ನು ಸರ್ಕಾರ ಹೊಂದಿಲ್ಲವೇ?' ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೊದಲು ಜಗತ್ತಿನ ಬೇರೆ ಬೇರೆ ಕಡೆ ಯಾವ ಏರ್ಪಾಟಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಜರ್ಮನಿಯಲ್ಲಿ ಯಾವ ಮಾಧ್ಯಮದ ಕಲಿಕೆಯಿರಬೇಕೆನ್ನುವುದನ್ನು ತೀರ್ಮಾನಿಸುವ ಹಕ್ಕು ಅಲ್ಲಿನ ಸರ್ಕಾರಕ್ಕಿದೆ. ಹಾಗೇ ಜಪಾನಿನ ಕಲಿಕೆಯ ಮಾಧ್ಯಮ ಯಾವುದಿರಬೇಕೆಂದು ತೀರ್ಮಾನಿಸುವ ಹಕ್ಕು ಜಪಾನಿನ ಸರ್ಕಾರಕ್ಕಿದೆ. ಪ್ರಜಾಪ್ರಭುತ್ವದಲ್ಲಿ ಜನರು ತಮ್ಮ ಮಕ್ಕಳ ಕಲಿಕೆಯ ಏರ್ಪಾಡು ಕಟ್ಟುವ, ನಿರ್ವಹಿಸುವ ಹಕ್ಕನ್ನು ತಮ್ಮ ಸರ್ಕಾರಕ್ಕೆ ಬಿಟ್ಟುಕೊಟ್ಟಿರುವುದರಿಂದ ಯಾವುದೇ ಸರ್ಕಾರಕ್ಕೆ ತನ್ನ ನಾಡಿನ ಕಲಿಕೆಯ ಏರ್ಪಾಡನ್ನು ನಿರ್ಣಯಿಸುವ ಹಕ್ಕಿರುವುದು ಸಹಜ ನ್ಯಾಯವಾಗಿದೆ. ಯಾಕೆಂದರೆ ಶಿಕ್ಷಣ ವ್ಯವಸ್ಥೆ ಎನ್ನುವುದು ಒಂದು ಸರ್ಕಾರ, ತನ್ನ ನಾಡಿನ ನಾಳೆಗಳನ್ನು ಕಟ್ಟಿಕೊಳ್ಳುವ ಸಾಧನವಾಗಿದೆ ಮತ್ತು ಯಾವುದೇ ಸಂದರ್ಭದಲ್ಲಿ ಇಂತಹ ಹಕ್ಕನ್ನೇ ಇಲ್ಲವಾಗಿಸುವುದು ನ್ಯಾಯಯುತವಾದ ತೀರ್ಪು ಎನ್ನಿಸುತ್ತದೆಯೇ ಎನ್ನುವುದನ್ನು ಕೇಳಿಕೊಳ್ಳಬೇಕಾಗಿದೆ!

ನ್ಯಾಯಾಲಯವು 'ಕರ್ನಾಟಕದ ಸರ್ಕಾರೇತರ ಶಾಲೆಗಳಲ್ಲಿ ಕಲಿಕೆಯ ಮಾಧ್ಯಮವಾಗಿ ಕನ್ನಡವನ್ನು ಕಡ್ಡಾಯ ಮಾಡುವಂತಿಲ್ಲಾ' ಎನ್ನುವ ತೀರ್ಪು ನೀಡುತ್ತಾ 'ಸರ್ಕಾರದಿಂದ ಸಹಾಯ ಪಡೆಯದ ಶಾಲೆಗಳಿಗೆ ಸರ್ಕಾರಿ ನೀತಿ ಅನ್ವಯವಾಗದು ಎಂದಿದೆ. ಆ ಮೂಲಕ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮೇಲೆ ಸರ್ಕಾರಕ್ಕೆ ಇರುವ ಹಿಡಿತವನ್ನು ಎತ್ತಿಹಿಡಿದಿದೆ ಎನ್ನಿಸಿ, ಆ ಮೂಲಕ ಒಂದು ಸರ್ಕಾರಕ್ಕೆ ಇದೆಯೆಂದು ಮೇಲೆ ವಿವರಿಸಲಾದ 'ಸಹಜವಾದ ಅಧಿಕಾರ'ಕ್ಕೆ ಧಕ್ಕೆ ತಂದಿಲ್ಲಾ ಎನ್ನುವ ಮಾತನ್ನಾಡಬಹುದು. ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವ ಮತ್ತು ನಿರ್ವಹಿಸುವ ಹೊಣೆಗಾರಿಕೆ ನಾಡಿನ ಸರ್ಕಾರದ್ದು ಎನ್ನುವುದು ಬೇರುಮಟ್ಟದ ದಿಟ. ಸರ್ಕಾರದ ಈ ಹೊಣೆಗಾರಿಕೆಯನ್ನು ಸಾಮಾಜಿಕ ಕಳಕಳಿಯ ಸಂಘಸಂಸ್ಥೆಗಳು ಹಗುರ ಮಾಡಲು, ಸರ್ಕಾರ ತಲುಪಲಾಗದ ಕಡೆ ಶಾಲೆಗಳನ್ನು ತೆರೆದು – ಅಂತಹ ಶಾಲೆಗಳ ನಿರ್ವಹಣೆಗೆ ಬೇಕಾದಷ್ಟು ಮಾತ್ರಾ ಹಣವನ್ನು ಸರ್ಕಾರದಿಂದ ಪಡೆಯಲು ಅರ್ಹರು – ನಡೆಸುವುದಕ್ಕೆ ಮಾತ್ರಾ

ಪುಟ 10 ಕ್ಕೆ ➤

ಭೂರಮೆ

# ಕನ್ನಡ ಜಾಗೃತಿ ಮತ್ತು ಮಹಿಳೆ

■ ಚಾರುಮತಿ
ಬೆಂಗಳೂರು

ನವೆಂಬರ್ 1 ಕನ್ನಡ ರಾಜ್ಯೋತ್ಸವದ ಸಂಭ್ರಮ. ಇದು ಕನ್ನಡಿಗರ ಹಬ್ಬ. ಕನ್ನಡದ ಹಬ್ಬ. ಹರಿದು ಹಂಚಿ ಹೋಗಿದ್ದ ನಾಡಿನ ಹಲವು ಭಾಗಗಳನ್ನು ಒಗ್ಗೂಡಿಸಿ ನವಕರ್ನಾಟಕದ ಉದಯವನ್ನು ಘೋಷಿಸಿದ್ದು 1956 ರ ನವೆಂಬರ್ 1 ರಂದು. ಈ ಸವಿನೆನಪಿನ, ಐತಿಹಾಸಿಕ ಸಂಗತಿಯ ಸಂಭ್ರಮಾಚರಣೆಯೇ ರಾಜ್ಯೋತ್ಸವದ ಸಡಗರ. ಈ ಸಮಯದಲ್ಲಿ ಏಕೀಕರಣಕ್ಕಾಗಿ ನಡೆದ ಹೋರಾಟ, ಅದರಲ್ಲಿ ಪಾಲ್ಗೊಂಡವರ ಪರಿಶ್ರಮ, ತ್ಯಾಗ, ಬಲಿದಾನಗಳನ್ನು ಸ್ಮರಿಸುವುದರೊಂದಿಗೆ ನಮ್ಮ ನಾಡಿನ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ಶ್ರೀಮಂತಿಕೆಯನ್ನು ಹೆಮ್ಮೆಯಿಂದ ಬಣ್ಣಿಸುವ ನೂರಾರು ಕಾರ್ಯಕ್ರಮಗಳು ನವೆಂಬರ್ ತಿಂಗಳಿಡೀ ನಾಡಿನಾದ್ಯಂತ ನಡೆಯುತ್ತವೆ. ಇವೆಲ್ಲದರೊಂದಿಗೆ ನಾಡಿನ ಭಾಷೆಯಾದ ಸವಿಗನ್ನಡದ ಲಾಲಿತ್ಯವನ್ನು, ವೈಶಿಷ್ಟ್ಯವನ್ನು, ಹಿರಿಮೆಯನ್ನು ತಿಳಿಸುವ ವೈವಿಧ್ಯಮಯ ಕಾರ್ಯಕ್ರಮಗಳನ್ನೂ ಯೋಜಿಸಲಾಗುತ್ತದೆ. ಇವೆಲ್ಲವೂ ಅಂದಿನಿಂದಲೂ ನಡೆದುಬಂದಿರುವ ಸಂಪ್ರದಾಯವೇ ಆಗಿದೆ.

'ಭಾಷೆ' ಎಂಬುದು ಕೇವಲ ಒಂದು ಪದವಲ್ಲ ಒಂದು ಮಾಧ್ಯಮವಷ್ಟೇ ಅಲ್ಲ, ವಿಚಾರವಿನಿಮಯ ಸಾಧನವಷ್ಟೇ ಅಲ್ಲ. ಅದು ಭಾವಕೋಶವನ್ನು ತಟ್ಟುವ ದನಿ. ಅದು ಅನುಭಾವ ಮಾಧ್ಯಮ. ಮಾತೃದೇವತೆಯಂತೆ ಭಾಷೆಯೂ ನಮಗೆ ದೇವಿಯ ಸಮಾನವೇ. ಅದಕ್ಕೇ ಕನ್ನಡಮ್ಮನ ಪೂಜೆಯೆಂದರೆ ಕನ್ನಡಾಂಬೆ ಭುವನೇಶ್ವರಿಯ ಆರಾಧನೆಯೇ. ಇದನ್ನು ಯಾವ ರೀತಿ ನಡೆಸಿಕೊಂಡು ಬಂದಿದೆ, ಜಾಗತೀಕರಣದ ಒತ್ತಡದಲ್ಲಿ ಪ್ರಭಾವದಲ್ಲಿ ಮುಂದೆಕೂಡ ಯಾವ ರೀತಿ ನಡೆಸಬೇಕು ಎಂಬುದರ ಕುರಿತು ಈಗ ಚಿಂತನೆ ಅಗತ್ಯವಾಗಿದೆ.

ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದರೂ ಕಾಲಕಾಲಕ್ಕೆ ಅನ್ಯಭಾಷೆಗಳ ಆಕ್ರಮಣವನ್ನೋ, ಪ್ರಭಾವವನ್ನೋ ನಿವಾರಿಸಿಕೊಳ್ಳಬೇಕಾದ ಅನಿವಾರ್ಯತೆಯು ಎದುರಾಗುತ್ತಲೇ ಇತ್ತು. ಅಂತಹ ಪರಿಸ್ಥಿತಿಗಳಲ್ಲಿ ಕನ್ನಡದ ಜಾಗೃತಿಯನ್ನು ಮೂಡಿಸಲು ಶ್ರಮಿಸಿದ ಹೋರಾಟ ಮಾಡಿದವರ ಸಾಲುಸಾಲೇ ನಮ್ಮೆದುರಿಗಿದೆ. ಅದರಲ್ಲಿ ಕೇವಲ ಪುರುಷರು ಮಾತ್ರವಲ್ಲ ಮಹಿಳೆಯರ ಸಂಖ್ಯೆಯೂ ಗಣನೀಯವಾಗಿಯೇ ಇದೆ. ನಂಜನಗೂಡಿನ ತಿರುಮಲಾಂಬ, ತಿರುಮಲೆ ರಾಜಮ್ಮ, ಆರ್. ಕಲ್ಯಾಣಮ್ಮ ಎಂ.ಆರ್. ಲಕ್ಷಮ್ಮ ಪಿ.ಆರ್ ಜಯಲಕ್ಷಮ್ಮ, ಕೆ.ಟಿ ಬನಶಂಕರಮ್ಮ, ಬಳ್ಳಾರಿ ಸಿದ್ದಮ್ಮ, ಪದ್ಮಾವತಿ ಅಂಗಡಿ, ಮಾಲತೀಬಾಯಿ ತಟ್ಟಿ, ಅಮೃತಾಬಾಯಿ, ಸುರಮಾಬಾಯಿ, ಬೆಳಗೆರೆ ಜಾನಕಮ್ಮ, ಸರಸ್ವತೀಬಾಯಿ ರಾಜವಾಡೆ ಹೀಗೆ ನಾಡಿನ ನಾನಾ ಪ್ರದೇಶಗಳಲ್ಲಿ ಎಷ್ಟೋ ಜನ ಮಹಿಳೆಯರು ತಮ್ಮ ತಮ್ಮ ಪರಿಧಿಯಲ್ಲಿ ಕನ್ನಡ ಭಾಷೆಯ ಸೇವೆ ಮಾಡುತ್ತ ಜನರಲ್ಲಿ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದ್ದರು. ಇಲ್ಲಿ ಹೆಸರಿಸಿರುವುದು ಕೇವಲ ಬೆರಳೆಣಿಕೆ ಮಾತ್ರ.

ನಂಜನಗೂಡಿನ ತಿರುಮಲಾಂಬ 'ಸರಸ್ವತೀ' ಎಂಬ ಕನ್ನಡ ಮಾಸಿಕವನ್ನು ಪ್ರಾರಂಭಿಸಿ ನಲವತ್ತೆರಡು ವರ್ಷಗಳವರೆಗೆ ನಡೆಸಿದರು. ಮಹಿಳೆಯರಿಗೇ ಸಂಬಂಧಿಸಿದಂತೆ 'ಸತೀಹಿತೈಷಿಣೀ' ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿ ಮೊಟ್ಟ ಮೊದಲ ಪತ್ರಕರ್ತೆಯೆನಿಸಿದರು. ಆರ್.ಕಲ್ಯಾಣಮ್ಮ ಮಕ್ಕಳ ಕೂಟನ್ನು ಪ್ರಾರಂಭಿಸಿ ಸಮಾಜಸೇವೆ ಮಾಡುವುದರೊಂದಿಗೆ ಪತ್ರಿಕೆಯೊಂದನ್ನೂ ನಡೆಸುತ್ತಿದ್ದರು. ಎಂ.ಆರ್ ಲಕ್ಷಮ್ಮ 'ಸೋದರಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಹೆಣ್ಣುಮಕ್ಕಳ ಬರವಣಿಗೆಗೆ ಪ್ರೋತ್ಸಾಹ ನೀಡುತ್ತಿದ್ದರು. ಕೆ.ಟಿ ಬನಶಂಕರಮ್ಮ ಸುಮಾರು ಆರು ದಶಕಗಳಿಗೂ ಹಿಂದೆಯೇ ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದು, ಇಂದಿಗೂ ಅಲ್ಲಿ ಮಕ್ಕಳು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವ ಸೌಲಭ್ಯವಿದೆ. ಪಿ.ಆರ್ ಜಯಲಕ್ಷಮ್ಮ ಬೆಂಗಳೂರಿನ ಮೊಟ್ಟಮೊದಲ ಮಹಿಳಾ ಉಪಮೇಯರ್ ಆಗಿದ್ದರಲ್ಲದೆ ಕನ್ನಡ ಶಾಲೆಯೊಂದನ್ನು ಆರಂಭಿಸಿ ಅನೇಕ ವರ್ಷಗಳು ನಡೆಸಿದರು. ಮೈಸೂರಿನಲ್ಲಿ ಅಮೃತಾಬಾಯಿ ಎಂಬುವವರು ಹೆಣ್ಣುಮಕ್ಕಳಲ್ಲಿ ಸ್ವಾವಲಂಬಿತನವನ್ನು ಬೆಳೆಸುವ ಸಲುವಾಗಿಯೂ ಕನ್ನಡ ಭಾಷೆಯ ಸೇವೆಯನ್ನು ಮಾಡುವ ಧ್ಯೇಯದಿಂದಲೂ, ಹೆಣ್ಣುಮಕ್ಕಳು ಕಲಿತು ಸುಶಿಕ್ಷಿತರಾಗಬೇಕೆಂಬ ಅಪೇಕ್ಷೆಯಿಂದಲೂ 'ಭಗಿನೀ ಸೇವಾ ಸಮಾಜ' ಎಂಬ ಸಮಾಜವನ್ನೂ ಸ್ಥಾಪಿಸುವುದರೊಂದಿಗೆ ಕನ್ನಡ ಶಾಲೆಯನ್ನೂ ಪ್ರಾರಂಭಿಸಿದರು. ಹೆಣ್ಣುಮಗಳೊಬ್ಬಳು ಹೆಣ್ಣು ಮಕ್ಕಳಿಗಾಗಿ ಇಂತಹ ಸಂಸ್ಥೆಯೊಂದನ್ನು ಮೊಟ್ಟಮೊದಲಿಗೆ ಮೈಸೂರಿನಲ್ಲಿ ಪ್ರಾರಂಭಿಸಿದ್ದರು.

ಇನ್ನು ಉತ್ತರ ಕರ್ನಾಟಕದ ಕಡೆಯಲ್ಲಿ ನಡೆದ ಕಾರ್ಯಗಳನ್ನು ಗಮನಿಸಿದರೆ ನಾಡಿನ ಏಕೀಕರಣಕ್ಕಾಗಿ ಹೋರಾಡಿದ ಮಹಿಳೆಯರಲ್ಲಿ ಬಳ್ಳಾರಿ ಸಿದ್ದಮ್ಮ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಪದ್ಮಾವತಿ ಅಂಗಡಿ ಮತ್ತು ಮಾಲತೀಬಾಯಿ ತಟ್ಟಿ ಧಾರವಾಡದಲ್ಲಿ ತಮ್ಮ ಅದ್ಭುತವಾದ ಭಾಷಣ ಕಲೆಯಿಂದ ಜನರಲ್ಲಿ ಕನ್ನಡ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದರು. ಮರಾಠೀ ಅಲೆಯಿಂದ ಕನ್ನಡಿಗರನ್ನು ಮುಕ್ತಗೊಳಿಸುವ ಧ್ಯೇಯ ಅವರದಾಗಿತ್ತು, ದಕ್ಷಿಣ ಕನ್ನಡದ ಕಡೆ ಸರಸ್ವತೀ ಬಾಯಿ ರಾಜವಾಡೆ 'ಕಥಾವಳಿ' ಎಂಬ ಪತ್ರಿಕೆಯಲ್ಲಿ 'ಗಿರಿಬಾಲೆ' ಎಂಬ ಕಾವ್ಯನಾಮದೊಂದಿಗೆ ಅಂಕಣ ಬರಹಗಳಿಂದ ಸ್ಫೂರ್ತಿಯ ಚೈತನ್ಯವಾಗಿದ್ದರು. ಸೊಲ್ಲಾಪುರದಲ್ಲಿದ್ದ ಜಯದೇವಿ ತಾಯಿ ಲಿಗಾಡೆಯವರು ಓದಿದ್ದು ಕೇವಲ ನಾಲ್ಕನೇ ತರಗತಿ. ಆದರೆ ಸ್ವಾಧ್ಯಾಯದ ಮೂಲಕ ಕನ್ನಡ ಮತ್ತು ಮರಾಠಿ ಎರಡೂ

ಪುಟ 9 ಕ್ಕೆ ➢

➢ ಪುಟ 5 ರಿಂದ..... ಕನ್ನಡ ಜಾಗೃತಿ...

ಭಾಷೆಗಳಲ್ಲಿ ಸಾಹಿತ್ಯ ರಚನೆಯ ಸಾಮರ್ಥ್ಯ ಹೊಂದಿದ್ದರು. ಸೊಲ್ಲಾಪುರ, ಬೀದರ್, ಬೆಳಗಾವಿ, ಸಾಂಗ್ಲಿಯಲ್ಲಿ ಕನ್ನಡ ಶಾಲೆ ಆರಂಭಿಸಿದ್ದು ಸ್ವಂತ ಹಣದಿಂದಲೇ ಶಿಕ್ಷಕರನ್ನು ನೇಮಿಸಿದ್ದರು. ಹಳೇ ಮೈಸೂರಿನತ್ತ ಬಂದರೆ, ಮೂಗೂರಿನ ನಾಯಕಸಾನಿಯರು ಕನ್ನಡ ಮತು ಸಂಸ್ಕೃತ ಭಾಷೆಗಳಲ್ಲಿ ಆಶು ಕವಿತೆಗಳನ್ನು ರಚಿಸುವಷ್ಟು ಭಾಷಾ ಪ್ರಭುತ್ವ ಹೊಂದಿದ್ದರು. ಇತರರಿಗೆ ಸ್ಫೂತಿಯನ್ನು ನೀಡುತ್ತಿದ್ದರು. ಈ ಎಲ್ಲ ಉದಾಹರಣೆಗಳು ಕನ್ನಡವನ್ನು ಒಂದು ಭಾಷೆಯನ್ನು, ಒಂದು ಸಂಸ್ಕೃತಿಯನ್ನು ಉಳಿಸಲು, ಮಹಿಳೆಯರು ಯಾವ ಯಾವ ರೀತಿಗಳಲ್ಲಿ ಜಾಗೃತಿ ಮೂಡಿಸುವ ಚಟುವಟಿಕೆಗಳಲ್ಲಿ ತೊಡಗಿದ್ದರೆಂಬುದನ್ನು ತಿಳಿಸುತ್ತವೆ. ಇವಿಷ್ಟೇ ಅಲ್ಲ. ಇನ್ನೂ ಹಿಂದೆ ಶರಣ ಚಳುವಳಿ ದಾಸ ಸಾಹಿತ್ಯದ ಕಾಲಘಟ್ಟಗಳಲ್ಲಿ ಕೂಡ ಮಹಿಳೆಯರ ಕನ್ನಡ ಸೇವೆಯ ದೃಷ್ಟಾಂತಗಳು ದೊರೆಯುತ್ತವೆ. ಇನ್ನು ನವೋದಯದ ನಂತರದಲ್ಲಿ ನವ್ಯ ನವ್ಯೋತ್ತರ ಪ್ರಕಾಶಗಳಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೂಡ ಇವರ ಕೊಡುಗೆ ಧಾರಾಳವಾಗಿಯೇ ಇದೆ. ಇವೆಲ್ಲವನ್ನು ಮೆಲುಕು ಹಾಕಿದ್ದಾಯಿತು. ಸರಿ ಆದರೆ ಈಗ ಯೋಚಿಸಬೇಕಾಗಿರುವುದು ವರ್ತಮಾನದಲ್ಲಿ ಜಾಗತೀಕರಣದ ಅಲೆಯಲ್ಲಿ ನಮ್ಮ ಕನ್ನಡ ಭಾಷೆಯನ್ನು ಅದರ ವಿಶಿಷ್ಟ ಗುಣಲಕ್ಷಣಗಳೊಂದಿಗೆ ಮುಂದಿನ ಜನಾಂಗಕ್ಕೆ ಆರೋಗ್ಯಕರವಾಗಿ ತಲುಪಿಸಿ ಪರಂಪರೆಯನ್ನು ಉಳಿಸಿಕೊಂಡು ಹೋಗುವುದು ಹೇಗೆಂಬುದನ್ನು ಪ್ರತಿಯೊಬ್ಬ ಮಹಿಳೆ ಎಳೆಯ ಜನಾಂಗಕ್ಕೆ ತಾಯಿಯಾಗಿ, ಗುರುವಾಗಿ, ಬಂಧುವಾಗಿ, ಹಿರಿಯಳಾಗಿ ಕನ್ನಡ ಭಾಷೆಯ ಮಹತ್ತ್ವವನ್ನು ತಿಳಿಸಿಕೊಡುತ್ತ ಭಾಷಾ ಪ್ರೀತಿಯನ್ನು ಬೆಳೆಸಬೇಕು. ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಿನ ಶಿಕ್ಷಕರು ಮಹಿಳೆಯರೇ ಇರುತ್ತಾರೆ. ಮಾತೃಭಾಷೆಯಾಗಿ, ರಾಜ್ಯ ಭಾಷೆಯಾಗಿ ಪ್ರತಿಯೊಂದು ಮಗು ಕನ್ನಡವನ್ನು ಕಲಿಯಬೇಕೆಂಬ ಅರಿವು ಮೂಡಿಸಬೇಕು. ಹಾಗೆ ಕಲಿಸುವಾಗ ಭಾಷಾ ಶುದ್ಧಿಯತ್ತಲೂ ಗಮನ ನೀಡಬೇಕು. ಪ್ರಸ್ತುತ ಆ ಕಾಳಜಿಯೇ ಕಾಣುತ್ತಿಲ್ಲ. ಮನೆಗಳಲ್ಲಿ, ಶಿಕ್ಷಣ ಕೇಂದ್ರದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಿ ಹೋದರೂ ಇಂದು ಕೇಳುವುದು ಇಂಗ್ಲಿಷ್, ಹಿಂದಿ, ತಮಿಳು ಬೆರೆತ ಕನ್ನಡವನ್ನೇ. ಸಮೂಹ ಮಾಧ್ಯಮಗಳಲ್ಲಿ ಜನಪ್ರಿಯವೆನಿಸಿದ ವಿದ್ಯುನ್ಮಾನ ಮಾಧ್ಯಮವನ್ನೂ ಈ ಜಾಡ್ಯ ಬಿಟ್ಟಿಲ್ಲ. ಯಾಕೆ ಈ ಧೋರಣೆ? ಅಸಡ್ಡೆ? ಕನ್ನಡದ ಕಾರ್ಯಕ್ರಮದಲ್ಲಿ ನಿರೂಪಕರು ಮಾತನಾಡುವಾಗ ಆಂಗ್ಲಭಾಷೆ ಬೆರೆಸದೆ ಕನ್ನಡವನ್ನು ಬಳಸುವುದೇ ಇಲ್ಲ. ಬೇರೆ ಯಾವುದೇ ಭಾಷೆಯಲ್ಲಿ ಕಲಬೆರಕೆ ಕಾಣುವುದಿಲ್ಲ. ಇದು ಕನ್ನಡವೆ? ಸಿರಿಗನ್ನಡವೆ? ಸಂದೇಹವುಂಟಾಗುತ್ತದೆ. **“ಕನ್ನಡವೆನೆ ಕುಣಿದಾಡುವುದೆನ್ನೆದೆ, ಕನ್ನಡವೆನೆ ಕಿವಿ ನಿಮಿರುವುದು”** ಎಂದು ಹಾಡಿದ ಕವಿಪುಂಗವರ ಅನುಭವ ನಮಗೂ ಆಗುವುದು ಬೇಡವೆ? “ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ ಅಳಿದ ಉಷ್ಣದ ಹಾಲಿನಂದದಿ, ಲಲಿತವಹ ಕನ್ನಡದ ನುಡಿಯ ಮಾಧುರ್ಯವನ್ನು ಉಳಿಸಬೇಕಲ್ಲವೇ?

ಎಷ್ಟು ಮನೆಗಳಲ್ಲಿ ಕನ್ನಡ ಪತ್ರಿಕೆಗಳನ್ನು ತರಿಸುತ್ತಾರೆ? ಕನ್ನಡದಲ್ಲಿ ಮಾತ್ರ ಕಡಿಮೆ ಅಂಕ ನಮ್ಮ ಮಕ್ಕಳಿಗೆ ಎಂದು ಕೊರಗುವ ತಂದೆ ತಾಯಿಗಳು ಅದನ್ನು ಸುಧಾರಿಸಲು ಯಾವ ಪ್ರಯತ್ನ ಮಾಡುತ್ತಾರೆ? ಅದೊಂದು ಕೊರತೆಯೆಂದೇ ಅವರಿಗನಿಸಿರುವುದಿಲ್ಲ. ಈ ಧೋರಣೆ ಸರಿಯೇ? ಶುದ್ಧವಾಗಿ ಕನ್ನಡವನ್ನು ಮಾತನಾಡುವ, ಬರೆಯುವ, ಓದುವ ಸಾಮರ್ಥ್ಯ ಬಾಲ್ಯದಿಂದಲೇ ಬರಬೇಕು. ಗುಣಮಟ್ಟದ ಪುಸ್ತಕಗಳನ್ನು ಬಿಡುವಿನ ವೇಳೆಯಲ್ಲಿ ಓದುವ ಹವ್ಯಾಸವನ್ನು ರೂಢಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ಒಂದು ಭಾಷೆ ತಲೆಮಾರಿನಿಂದ ತಲೆಮಾರಿಗೆ ಚೈತನ್ಯಪೂರ್ಣವಾಗಿ ಪ್ರವಹಿಸಬೇಕಾದರೆ ಅದನ್ನು ಸರಿಯಾದ ರೀತಿಯಲ್ಲಿ ಬಳಸಿದಾಗ ಮಾತ್ರ ಸಾಧ್ಯ. ಆಗಲೇ ಅದು ಜೀವಂತಿಕೆಯಿಂದಿರಲು ಸಾಧ್ಯ. ಭಾಷಾಜ್ಞಾನ ಒಂದು ರೀತಿಯಲ್ಲಿ ಸಂಸ್ಕೃತಿಯ ಪಾಠವನ್ನೂ ಕಲಿಸುತ್ತದೆ. ಇದರ ಪ್ರಾರಂಭ, ಹೆಚ್ಚು ಜವಾಬ್ದಾರಿ ಮಹಿಳೆಯದೇ. ಏಕೆಂದರೆ ‘ತಾಯಿಯೇ ಮೊದಲ ಗುರು’ ತಾನೇ? ಆಕೆ ಸಾಮಾನ್ಯ ಹೆಣ್ಣು ಮಗಳಾಗಿರಬಹುದು, ವಿಜ್ಞಾನಿ ಅಥವಾ ಬರಹಗಾರ್ತಿಯಾಗಿರಬಹುದು ಮತ್ತು ಉದ್ಯೋಗದಲ್ಲಿರಬಹುದು. ಆದರೆ ಭಾಷೆಯನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆಯಲ್ಲಿ ಆಕೆಯ ಪಾತ್ರ ಮಹತ್ವದ್ದಾಗಿರುತ್ತದೆ. ಮಗುವಿನ ವ್ಯಕ್ತಿತ್ವ ರೂಪುಗೊಳಿಸುವಾಗ ಮಾತೃಭಾಷೆಯ ಪ್ರೀತಿಯನ್ನೂ ಆಸಕ್ತಿಯನ್ನೂ ಮಗುವಿನಲ್ಲಿ ಬೆಳೆಸಬೇಕಾದುದು ಅವಶ್ಯ. ಕನ್ನಡ ನುಡಿಯನ್ನು ಬೆಳೆಸಲು ಶ್ರಮಿಸಿದ ಹಿರಿಯರ ಪರಿಚಯವನ್ನು ಮಾಡಿಕೊಡುವುದರೊಂದಿಗೆ ಅವರ ಕೃತಿಗಳ ಪರಿಚಯವನ್ನೂ ಸ್ಥೂಲವಾಗಿಯಾದರೂ ನೀಡಬೇಕು. ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಗುರುತಿಸುತ್ತ, ಅದರ ಮೂಲ ಗುಣಲಕ್ಷಣಗಳನ್ನು ಮರೆಯದೆ ಬಳಸುವಂತೆ ಮಾರ್ಗದರ್ಶನ ನೀಡಬೇಕು. ಆಂಗ್ಲಭಾಷಾ ವ್ಯಾಮೋಹದಿಂದ ಕನ್ನಡ ಕಾರ್ಯಕ್ರಮಗಳನ್ನೂ ಪ್ರಾರಂಭ ಮತ್ತು ಅಂತ್ಯವನ್ನು ಆಂಗ್ಲ ಭಾಷೆಯ ಬಳಕೆಯೊಂದಿಗೇ ನಡೆಸುವ ಹುಚ್ಚುತನವನ್ನು ದೂರಮಾಡಬೇಕು. ಯಾಕೀ ಆಕರ್ಷಣೆ? ತಿರುಳ್ಗನ್ನಡದಲ್ಲಿ ಶಬ್ದಸಂಪತ್ತಿಲ್ಲವೆ! ಪ್ರತಿಯೊಂದು ಭಾಷೆಗೆ ಅದರದೇ ಆದ ನಿಯಮವಿರುತ್ತದೆ. ಅದನ್ನೆಲ್ಲ ಪಾಲಿಸಿಕೊಂಡು ಬಂದು, ಕಾಲ ಕಾಲಕ್ಕೆ ತಕ್ಕಂತೆ ಹೊಸ ಅಂಶಗಳನ್ನೂ ಸೇರಿಸಿಕೊಂಡರೆ ಆ ಭಾಷೆ ಉಳಿಯಲೂ, ಬೆಳೆಯಲೂ ಸಾಧ್ಯ. ಮೂಲಗುಣವನ್ನೇ ತೊಡೆದು ಹಾಕುವುದೆಂದರೆ (ಈಗ ಕೆಲವರು ಕನ್ನಡ ವರ್ಣಮಾಲೆಯ ಸ್ವರೂಪವನ್ನೇ ಬದಲಾಯಿಬೇಕೆನ್ನುತ್ತಿದ್ದು ಇನ್ನು ಕೆಲವರು ಅದನ್ನು ಒಪ್ಪಿಯೂ ಇದ್ದಾರಲ್ಲ?) ಸಾವಿರಾರು ವರ್ಷಗಳಿಂದ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತ ಬಂದಿರುವ ಗ್ರಂಥರಾಶಿಯನ್ನೆಲ್ಲ ಆಚೆಗೆಸೆಯಬೇಕಾಗುತ್ತದೆ.

ಭಾಷೆಯಿಂದಲೇ ವಿಚಾರ ಸಾಹಿತ್ಯ, ಸಂಸ್ಕೃತಿ, ಪರಂಪರೆ ಎಲ್ಲವೂ. ಅದು ಒಂದು ದುರ್ಬಲವಾದರೆ, ಜಾಳಾದರೆ ಎಲ್ಲವೂ ಅದೇ ದಾರಿಯನ್ನು ಹಿಡಿಯುತ್ತದೆ. ಹಾಗಾಗಿ ಒಂದೊಂದು ಸಣ್ಣ ಅಂಶವೂ ನಮ್ಮತನವನ್ನು ಕಾಪಾಡಿಕೊಳ್ಳಲು ಇಡಿಯಾಗಿ

ಪುಟ 10 ಕ್ಕೆ ➢

# ಮನವಿ

## ಜಿಲ್ಲಾಧಿಕಾರಿಗಳು, ಬೆಂಗಳೂರು ಇವರ ಮೂಲಕ

ಇವರಿಗೆ

ಗೌರವಾನ್ವಿತ ಮಾನ್ಯ ಶ್ರೀ ಪ್ರಕಾಶ್ ಜಾವಡೇಕರ್
ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವರು,
ಕೇಂದ್ರ ಸರ್ಕಾರ ನವದೆಹಲಿ

## ವಿಷಯ: ಶೈಕ್ಷಣಿಕ ಬೇಡಿಕೆಗಳ ಕುರಿತು ಮನವಿ.

1. ಕಡ್ಡಾಯವಾಗಿ ಪೂರ್ಣಾವಧಿ ಖಾಯಂ ಶಿಕ್ಷಕರ ನೇಮಕವಾಗಬೇಕು ಮತ್ತು ಶಿಕ್ಷಕರ ತರಬೇತಿಯನ್ನು ಹೆಚ್ಚು ಸಶಕ್ತ ಮಾಡಬೇಕು.
2. ಎಲ್ಲಾ ಶಿಕ್ಷಕರಿಗೆ ಆರೋಗ್ಯ ಕಾರ್ಡ್ ನೀಡಬೇಕು.
3. ಶಿಕ್ಷಣದ ವ್ಯಾಪಾರೀಕರಣ ನಿಲ್ಲಬೇಕು.
4. ಶಿಕ್ಷಣದ ಆಯೋಗ ರಚನೆಯಾಗಬೇಕು.
5. ರಾಷ್ಟ್ರೀಯ ಭಾವೈಕ್ಯತೆ, ಭಾರತೀಯ ಮೌಲ್ಯಗಳು, ಮಾನವೀಯತೆ ಮತ್ತು ವ್ಯಕ್ತಿತ್ವ ಬೆಳವಣಿಗೆಗೆ ಸಹಾಯಕವಾಗುವ, ಸಾಮಾಜಿಕ ಕಾಳಜಿ, ಮೌಲಿಕ ಚಿಂತನೆ, ಸಂಶೋಧನೆಗೆ ಸಹಾಯಕವಾಗುವ ಶಿಕ್ಷಣ ನೀಡಬೇಕು.
6. ಜಿ.ಡಿ.ಓ ದ 10% ನ್ನು ಮತ್ತು ಕೇಂದ್ರಸರ್ಕಾರ ಮತ್ತು ಬಜೆಟ್‌ನ 30% ರಷ್ಟು ಹಣವನ್ನು ರಾಜ್ಯ ಸರ್ಕಾರ ಶಿಕ್ಷಣದ ಬೆಳವಣಿಗೆಗೆ ಮೀಸಲಿಡಬೇಕು ಮತ್ತು ಎಲ್ಲಾ ಶಾಲೆಗಳಿಗೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.
7. ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿದ ಎಲ್ಲಾ ಶಿಕ್ಷಕರಿಗೆ ಶ್ರೇಣಿಕೃತ ಸಮಾನ ವೇತನ ನೀಡಬೇಕು.
8. ಶಿಕ್ಷಕರನ್ನು ಅನ್ಯಕಾರ್ಯಗಳಿಂದ ಮುಕ್ತಗೊಳಿಸಬೇಕು.
9. ಇಡೀ ದೇಶದಲ್ಲಿ ಸೇವಾ ನಿವೃತ್ತಿ ವಯಸ್ಸು 65 ವರ್ಷವಾಗಬೇಕು.
10. ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ನಿರ್ಣಯಗಳಲ್ಲಿ ಶಿಕ್ಷಕರ ಸಹಭಾಗಿತ್ವವನ್ನು ಸುನಿಶ್ಚಿತಗೊಳಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ರಾಜನೈತಿಕ ಹಾಗೂ ಆಡಳಿತಾತ್ಮಕ ಹಸ್ತಕ್ಷೇಪ ತಡೆಯಬೇಕು.
11. ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ ನೀಡಬೇಕು.
12. ಪದೋನ್ನತಿಗಾಗಿ ಪೂರ್ವ ಸೇವಾಕಾಲವನ್ನು ಗಣನೆಗೆ ತೆಗೆದುಕೊಳ್ಳಬೇಕು.
13. 1 ಜನವರಿ 2004 ಕ್ಕಿಂತ ಮುಂಚಿರುವ ನಿವೃತ್ತಿವೇತನ ಯೋಜನೆಯನ್ನು ಎಲ್ಲಾ ವಿದ್ಯಾಲಯಗಳಲ್ಲೂ ಪುನಃ ಪ್ರಾರಂಭಿಸಬೇಕು.
14. 6ನೇ ವೇತನ ಆಯೋಗದ ತಾರತಮ್ಯಗಳನ್ನು ನಿವಾರಿಸಬೇಕು.
15. ಏಳನೇ ವೇತನ ಆಯೋಗದ ಶಿಫಾರಸ್ಸನ್ನು ಏಕರೂಪದಲ್ಲಿ ದೇಶಾದ್ಯಂತ ಜಾರಿಗೊಳಿಸಬೇಕು.
16. ಅನುದಾನಿತ ಶಾಲೆಗಳ ಶಿಕ್ಷಕರ ವೇತನವನ್ನು ಖಜಾನೆಯ ಮೂಲಕ ಪಾವತಿ ಮಾಡಬೇಕು.
17. ವಿದ್ಯಾಮಿತ್ರ, ಅರೆಕಾಲಿಕ ಶಿಕ್ಷಕರು, ಗುತ್ತಿಗೆ ಶಿಕ್ಷಕರು, ಅತಿಥಿ ಶಿಕ್ಷಕರು, ಪ್ರಬೋಧ್, ಶಿಕ್ಷಕ ಮಿತ್ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಕನಿಷ್ಠ ವೇತನ ಶ್ರೇಣಿಯನ್ನು ನಿಗದಿಪಡಿಸಿ ಅದರ ಜಾರಿಯನ್ನು ಖಾತ್ರಿಪಡಿಸಿಕೊಳ್ಳಬೇಕು.
18. ನುರಿತ ಶೈಕ್ಷಣಿಕ ತಂಡವನ್ನು ರಚಿಸಬೇಕು.

**ಸೂಚನೆ**

**ಮಾಧ್ಯಮಿಕ ಶಿಕ್ಷಕ ಸಂಘದ ಸಂಸ್ಥಾಪಕರಲ್ಲೊಬ್ಬರೂ, ಹಲವು ವರ್ಷ ಅದರ ಅಧ್ಯಕ್ಷರಾಗಿ, 3 ಅವಧಿಗೆ ಶಿಕ್ಷಕ ಕ್ಷೇತ್ರದ ಶಾಸಕರಾಗಿ ಶಿಕ್ಷಣ ಕ್ಷೇತ್ರಕ್ಕೆ, ಶಿಕ್ಷಕರಿಗೆ ಮಹತ್ವದ ಸೇವೆ ಸಲ್ಲಿಸಿದ ಪ್ರೊ. ಕೃ. ನರಹರಿ ಅವರು ತಮ್ಮ ಸಾರ್ಥಕ ಜೀವನದ 86 ವಸಂತಗಳನ್ನು ಪೂರೈಸಿದ ಸಂದರ್ಭದಲ್ಲಿ ಅವರ ಅಭಿಮಾನಿಗಳೆಲ್ಲಾ ಸೇರಿ ಡಿಸೆಂಬರ್ 10, 2017 ರ ಭಾನುವಾರದಂದು ಅವರನ್ನು ಅಭಿನಂದಿಸುವ ಸಮಾರಂಭವನ್ನು ಆಯೋಜಿಸಿದ್ದಾರೆ.**

ವಿವರಗಳು ಮುಂದಿನ ಸಂಚಿಕೆಯಲ್ಲಿ.

# ಮಕ್ಕಳ ದಿನಾಚರಣೆ

ವಿ. ರಾಜು
ಕನ್ನಡ ಭಾಷಾ ಸಂಪನ್ಮೂಲ ವ್ಯಕ್ತಿ
ಶಿಕ್ಷಣ ಪ್ರಕೋಷ್ಠ ಪ್ರಮುಖ್
ಕ.ರಾ.ಮಾ.ಶಿ.ಸಂ.

ಜವಾಹರ್‌ಲಾಲ್ ನೆಹರುವರಿಗೆ ಮಕ್ಕಳೆಂದರೆ ಬಹಳ ಇಷ್ಟ.ಅವರು ಅನಾಥ ಮಕ್ಕಳು ಕೊಟ್ಟ ಗುಲಾಬಿಯನ್ನು ತಮ್ಮ ಕೋಟಿನ ಜೇಬಿಗೆ ಅಂಟಿಸಿ ಸಂತೋಷಪಡುತ್ತಿದ್ದರಂತೆ. ಮಕ್ಕಳ ಮೇಲಿದ್ದ ಇವರ ಅಕ್ಕರೆ, ಪ್ರೀತಿಯ ಸಂಕೇತವಾಗಿ ದೇಶದಾದ್ಯಂತ ನವೆಂಬರ್ 14 ರಂದು ಶಾಲೆಗಳಲ್ಲಿ ಮಕ್ಕಳ ದಿನಾಚರಣೆ ಆಚರಿಸಲಾಗುತ್ತದೆ. ಇವರು ಪ್ರಧಾನಿಯಾಗಿದ್ದ ಸಮಯದಲ್ಲಿ ಮಕ್ಕಳ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸಿದ್ದರಂತೆ. ಇಂದಿನ ಮಕ್ಕಳೇ ಮುಂದಿನ ಜನಾಂಗ.

ವಿ.ಎನ್. ಕುಲಕರ್ಣಿ ಎನ್ನುವವರು 1951ರಲ್ಲಿ ವಿಶ್ವಸಂಸ್ಥೆಯ ಒಂದು ಯೋಜನೆಯಡಿಯಲ್ಲಿ ಇಂಗ್ಲೆಂಡಿನ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿದ್ದರು. ಆ ದಿನಗಳಲ್ಲಿ ಬಡ ಮಕ್ಕಳ ಅಭಿವೃದ್ಧಿಗಾಗಿ ನಿಧಿ ಸಂಗ್ರಹಕ್ಕೆ ರಾಣಿ ಎಲಿಜಬೆತ್–2 ಅವರ ಜನ್ಮದಿನವನ್ನು, 'ಧ್ವಜ ದಿನಾಚರಣೆ'ಯನ್ನಾಗಿ ಆಚರಿಸುತ್ತಾ ಧನ ಸಂಗ್ರಹಿಸಲಾಗುತ್ತಿತ್ತು. ಆ ಸಂದರ್ಭದಲ್ಲಿ ಕುಲಕರ್ಣಿಯವರ ಮನಸ್ಸು ಸಹಜವಾಗಿಯೇ ಭಾರತೀಯ ಮಕ್ಕಳ ಸ್ಥಿತಿಗತಿಯ ಬಗ್ಗೆ ಮಿಡಿದಿತ್ತು.

ಇಂತಹದೊಂದು ಯೋಜನೆ ಭಾರತದಲ್ಲೂ ನಡೆಯಬೇಕು; ಮಕ್ಕಳಿಗಾಗಿ ಧನ ಸಂಗ್ರಹಿಸಿ ವಿಶೇಷ ಕಾರ್ಯಕ್ರಮಗಳನ್ನು ನಡೆಸಬೇಕು ಎನ್ನುವ ಬಗ್ಗೆ ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪವಿಟ್ಟರು. ಇದಕ್ಕೆ ಭಾರತದ ಮೊದಲ ಪ್ರಧಾನಮಂತ್ರಿಯಾಗಿದ್ದ ಚಾಚಾ ನೆಹರೂ ಅವರ ಜನ್ಮದಿನದಷ್ಟು ಪ್ರಶಸ್ತವಾದ ದಿನ ಬೇರೊಂದಿಲ್ಲ ಎನ್ನುವ ಅಭಿಪ್ರಾಯವನ್ನೂ ಮುಂದಿಟ್ಟರು.

ಆದರೆ ಚಾಚಾ ನೆಹರೂ ಅವರಿಗೆ ಮಕ್ಕಳ ಮೇಲಿನ ಮಮತೆ ಎಷ್ಟಿತ್ತೆಂದರೆ ಅವರು ಮಕ್ಕಳಿಗಾಗಿ ಏನು ಮಾಡಲೂ ಸಿದ್ಧವಿದ್ದರು. ಮುಜುಗರ ಬದಿಗಿಟ್ಟು ಅತ್ಯಂತ ಸಂತೋಷದಿಂದ ತಮ್ಮ ಜನ್ಮದಿನವನ್ನು 'ಮಕ್ಕಳ ದಿನಾಚರಣೆ'ಯೆಂದು ಆಚರಿಸಲು ಒಪ್ಪಿಕೊಂಡರು. ಈ ರೀತಿ 1951ರಲ್ಲಿ ನವೆಂಬರ್ 14ರಂದು ಭಾರತದಲ್ಲಿ 'ಮಕ್ಕಳ ದಿನಾಚರಣೆ' ಆರಂಭವಾಯಿತು.

ಮಕ್ಕಳ ಹಕ್ಕು, ಹಿತರಕ್ಷಣೆ ಮತ್ತು ಯೋಗಕ್ಷೇಮದ ಉದ್ದೇಶದೊಂದಿಗೆ ಜಗತ್ತಿನಾದ್ಯಂತ ಮಕ್ಕಳ ದಿನಾಚರಣೆಯನ್ನು ಬೇರೆ ಬೇರೆ ದಿನಾಂಕಗಳಂದು ಆಚರಿಸುತ್ತಿದ್ದಾರೆ. ನವೆಂಬರ್ 20ರಂದು 'ಯುನಿವರ್ಸಲ್ ಚಿಲ್ಡ್ರನ್ಸ್ ಡೇ' ಎಂದಾದರೆ, ಜೂನ್ 1ರಂದು 'ಇಂಟರ್ ನ್ಯಾಷನಲ್ ಚಿಲ್ಡ್ರನ್ಸ್ ಡೇ' ಆಚರಣೆಯಲ್ಲಿದೆ. ಇಂದು ಬಹಳಷ್ಟು ದೇಶಗಳು, ತಮ್ಮ ಮಕ್ಕಳಪ್ರೇಮಿ ರಾಷ್ಟ್ರನಾಯಕರೊಬ್ಬರ ಜನ್ಮದಿನವನ್ನು 'ಮಕ್ಕಳ ದಿನಾಚರಣೆ' ರೂಪದಲ್ಲಿ ಆಚರಿಸುತ್ತಿವೆ.

ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮತ್ತು ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ತಾಯಿ– ತಂದೆಯ ಪಾತ್ರ ಉಳಿದೆಲ್ಲರಿಗಿಂತ ಬಹಳ ಮುಖ್ಯವಾದುದು. ಮಕ್ಕಳು ಮುಗ್ಧರು. ಅವರು ಬಾಲ ಜಗತ್ತಿನಿಂದ ಹಿರಿಯರ ವಾಸ್ತವಿಕ ಜಗತ್ತಿಗೆ ಕ್ರಮೇಣ ಹೊಂದಿಕೊಳ್ಳುವ ಸಂದರ್ಭದಲ್ಲಿ ಅವರ ಮಾತುಗಳಲ್ಲಿ ಬೆಳವಣಿಗೆಯ ಮೇಲೆ ದೀರ್ಘ ಪರಿಣಾಮ ಉಂಟುಮಾಡುವ ವಿಷಯಗಳೆಂದರೆ ಮನೆಯ ಇನ್ನಿತರರು, ಬೆಳೆಯುವ ಪರಿಸರ, ಆಟದ ಸ್ಥಳ, ಶಾಲೆ ಇತ್ಯಾದಿ.

ಇಂದಿನ ದಿನಪತ್ರಿಕೆಗಳಲ್ಲಿ ಆಗಾಗ (ಹೆಚ್ಚು ಕಡಿಮೆ ಪ್ರತಿದಿನವೂ!) ಕಾಣಿಸಿಕೊಳ್ಳುವ ತಲೆಬರಹಗಳ ಬಗ್ಗೆ ಚಿಂತನೆ ನಡೆಸಿದಾಗ ನಮ್ಮ ಸಮಾಜವು ಅಧಃಪತನಕ್ಕೀಡಾಗುತ್ತಿರುವ ಅಂಶವು ಗೋಚರಿಸಿ, ಗಾಂಧೀಜಿಯವರು ಕಂಡ 'ರಾಮರಾಜ್ಯ'ದ ನಿರೀಕ್ಷೆಯಿಟ್ಟುಕೊಂಡಿರುವವರಿಗೆ ಭ್ರಮನಿರಸನವನ್ನುಂಟು ಮಾಡುತ್ತಿರುವುದು ಸ್ಪಷ್ಟವಾಗುತ್ತದೆ. ಇವುಗಳಿಗೆಲ್ಲಾ ಮೌಲ್ಯಗಳ ಬದಲಾಗಿ ಸ್ವಾರ್ಥಲಾಲಸೆಗೆ, ಭೋಗಜೀವನಕ್ಕೆ ಹಾಗೂ ಇದನ್ನು ಪೂರೈಸಲು ಬೇಕಾದ ಹಣಕ್ಕೆ ಬೆಲೆಕೊಡುತ್ತಿರುವ ಸಮಾಜ, ಅಂದರೆ ಈ ಸಿದ್ಧಾಂತದತ್ತ ವಾಲಿರುವ ನಾವುಗಳೇ ಕಾರಣವೆಂದರೆ ಕೆಲವರು ಸಿಟ್ಟಾಗಬಹುದು!

ಈ ಪರಿಸ್ಥಿತಿಯು ಸುಧಾರಿಸಬೇಕಾದರೆ ನೈತಿಕ ಮೌಲ್ಯಗಳಿಗೆ ಗೌರವವನ್ನಿತ್ತು, ಪರಸ್ಪರರಿಗೆ ಸಹಕಾರ ನೀಡುವಂತಹ ಸಾರಯುತ ಸಮಾಜದ ನಿರ್ಮಾಣವಾಗಬೇಕು. 'ಬೆಳೆಯುವ ಸಿರಿ ಮೊಳಕೆಯಲ್ಲಿಯೇ'; ಆದ್ದರಿಂದ ನೀತಿವಂತರಾದ ಯುವ ಜನತೆಯ ನಿರ್ಮಾಣವಾದರೆ, ಅದು ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಸುಭದ್ರ ಅಡಿಪಾಯವಾಗುತ್ತದೆ. ಇದೆಲ್ಲಾ ರಾತ್ರೋ ರಾತ್ರಿಯಾಗುವ ಕೆಲಸವಲ್ಲ. ಬಹುಕಾಲದಿಂದ ಭೋಗದೆಡೆಗೆ ಜಾರಿರುವ ಸಮಾಜವನ್ನು ನೀತಿಯ ಚೌಕಟ್ಟಿಗೆ ಒಳಪಡಿಸಲು ಅಪಾರ ಪರಿಶ್ರಮದ ಅಗತ್ಯವಿದೆ.

ಸಂಪತ್ತು ನಷ್ಟಹೊಂದಿದರೆ, ಏನೂ ನಷ್ಟವಿಲ್ಲ; ಆರೋಗ್ಯವು ಇಲ್ಲವಾದರೆ, ಏನೋ ಸ್ವಲ್ಪವನ್ನು ಕಳೆದುಕೊಂಡಂತೆ; ಆದರೆ ಮನುಷ್ಯನು ಸಚ್ಚಾರಿತ್ರ್ಯವನ್ನು ಹೊಂದದಿದ್ದರೆ, ಎಲ್ಲವನ್ನೂ ಕಳೆದುಕೊಂಡಂತೆ ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಹಣವಂತನಿಗಿಂತ ಗುಣವಂತನಿಗೆ ಅಂದು ಹೆಚ್ಚಿನ ಗೌರವವು ಲಭ್ಯವಾಗುತ್ತಿತ್ತು. ಆಗ ಮಹಾಜ್ಞಾನಿಗಳು, ವಿರಾಗಿಗಳು, ಪರೋಪಕಾರಿಗಳು ನಮ್ಮ ಆದರ್ಶಪುರುಷರಾಗಿದ್ದರು. ಅಂದಿನ ಶಿಕ್ಷಣಪದ್ಧತಿಯು ಕೇವಲ ವಿಚಾರಗಳನ್ನು ತಲೆಗೆ ತುಂಬದೇ, ಜ್ಞಾನದ ಜೊತೆಯಲ್ಲಿಯೇ ಶೀಲದ ನಿರ್ಮಾಣಕ್ಕೆ ಒತ್ತು ನೀಡುತ್ತಿತ್ತು.

ಪುಟ 9 ಕ್ಕೆ ➤

➢ ಪುಟ 8 ರಿಂದ..... ಮಕ್ಕಳ ದಿನಾಚರಣೆ...

'ಗೋವಿನ ಹಾಡಿ'ನಲ್ಲಿ ಪುಣ್ಯಕೋಟಿಗೆ ಎದುರಾದ ಕಷ್ಟ ಕೋಟಲೆಗಳನ್ನೋದಿ ಕಣ್ಣೀರು ಸುರಿಸದ, ಅದರ ಸತ್ಯ ಸಂಧತೆಯನ್ನು ಮನದಲ್ಲೇ ಮೆಲುಕು ಹಾಕದ ವಿದ್ಯಾರ್ಥಿ ಗಳಿರಲಿಲ್ಲ. ಅಂದಿನ ವಿದ್ಯಾರ್ಥಿಗಳ ಮನದಲ್ಲಿ ಶಿವಾಜಿ ಮಹಾರಾಜನ ದೇಶಭಕ್ತಿ, ಕಿತ್ತೂರು ಚೆನ್ನಮ್ಮಾಜಿಯ ಶೌರ್ಯ, ಮ್ಯಾಕ್ಸ್ ಮುಲ್ಲರನು ನಮ್ಮ ಸನಾತನ ಸಂಸ್ಕೃತಿಯನ್ನು ಅವಹೇಳನ ಮಾಡಹೋಗಿ ಕೊನೆಗೆ ಅದನ್ನೇ ತನ್ನ ಜೀವಾಳವನ್ನಾಗಿ ಪರಿವರ್ತಿಸಿಕೊಂಡು ಅವನು ಭಾರತೀಯತೆಗೆ ಸಲ್ಲಿಸಿದ ಕಾಣಿಕೆಯೇ ಮೊದಲಾದ ಸದ್ವಿಚಾರಗಳು ಅಚ್ಚಳಿಯದ ಛಾಪನ್ನೊತ್ತಿದ್ದವು. ಅದೇ ಸಮಯದಲ್ಲಿ ಮಹಾತ್ಮಾ ಗಾಂಧೀಜಿ ಯವರು ದೇಶದ ನಾಡಿಮಿಡಿತವನ್ನರಿತು ಸದಾಚಾರಿಗಳಾಗುವಂತೆ ಕರೆಕೊಟ್ಟಾಗ ದೇಶಕ್ಕೆ ದೇಶವೇ ಓಗೊಟ್ಟು ಸತ್ವಯುತವಾದ ಸಮಾಜದ ನಿರ್ಮಾಣವಾಗಿತ್ತೆಂದರೆ, ಅದು ಅತಿಶಯೋಕ್ತಿ ಎನಿಸದು.

ಆದರೆ ಅದಾದ ಕೆಲವರ್ಷಗಳ ನಂತರದಲ್ಲಿಯೇ ನೈತಿಕವಾಗಿ ನಾವೆಷ್ಟು ಅಧೋಗತಿಗಿಳಿದು ಬಿಟ್ಟೆವು? ಪಾಶ್ಚಾತ್ಯರ ಸದ್ವಿಚಾರ ಗಳನ್ನು ಅವಗಾಹಿಸದೇ, ಅವರ ಸ್ವೇಚ್ಛಾ ಜೀವನಶೈಲಿಯಷ್ಟನ್ನೇ ಅಂಧಾನುಕರಣೆ ಮಾಡುವ ಜನತೆ, ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿ ಪರಸ್ಪರರಲ್ಲಿ ಗೌರವ, ಸಹಕಾರ ಪ್ರವೃತ್ತಿ ನಿರ್ಮಾಣ ವಾಗದಂತೆ ಮಾಡಿ ಸ್ವಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳು, ಭ್ರಷ್ಟಾಚಾರ, ಲಂಚಗುಳಿತನಗಳೇ ಮೊದಲಾದ ಕರಾಳ ಅಂಶಗಳಿಂದ ಸಮಾಜ ನರಳುತ್ತಿದೆ. ಇದಕ್ಕೆಲ್ಲಾ ನವಯುಗದ ನಿರ್ಮಾತರಾದ ಮಕ್ಕಳಿಗೆ ನೈತಿಕ ಶಿಕ್ಷಣ ವನ್ನೊದಗಿಸುವುದೇ ಸಂಜೀವಿನಿಯಾಗಿದೆ. ಯುವಜನತೆಯು ಹೆಚ್ಚು ಶಕ್ತಿಯುತವೂ, ನೈತಿಕ ಬಲವುಳ್ಳದ್ದೂ ಆದರೆ ಕ್ರಮೇಣವಾಗಿ ಸಾಮಾಜಿಕ ಪಿಡುಗುಗಳ ಸದ್ದಡಗುತ್ತಾ ಹೋಗುತ್ತದೆ.]

ಅದೇನೇ ಇರಲಿ; 'ಹಿಂದಿನ ಕಾಲ ಚೆನ್ನಾಗಿತ್ತು; ಈಗೆಲ್ಲಾ ಕೆಟ್ಟು ಕುಲವೆದ್ದು ಹೋಗಿದೆ'ಯೆಂಬ ನಿರಾಶಾದಾಯಕ ಸಿನಿಕತನವನ್ನು ಬದಿಗಿಟ್ಟು ಮುಂದೆ ಮಾಡಬಹುದಾದರೆಡೆಗೆ ಗಮನ ಹರಿಸೋಣ. ಮಕ್ಕಳಿಗೆ ಗಿಳಿಪಾಠವನ್ನಷ್ಟೇ ಮಾಡದೇ, ನೀತಿ, ಪ್ರಾಮಾಣಿಕತೆಗಳ ಮಹತ್ವವನ್ನರಿತು ಅವುಗಳನ್ನು ಸ್ವತಃ ಪಾಲಿಸಿ, ಮಕ್ಕಳಿಗೆ ಆದರ್ಶಪ್ರಾಯರಾಗಿ ಪ್ರೀತಿಯಿಂದ ಇದನ್ನು ಬೋಧಿಸುವ ಗುರುಸಮುದಾಯ ನಿರ್ಮಾಣವಾಗಬೇಕು. ಅಂತಹವರು ಸ್ವಲ್ಪ ಜನರಾದರೂ 'ಎಲೆಮರೆಯ ಕಾಯಿ'ಗಳಂತೆ ನಮ್ಮ ಸಮಾಜದಲ್ಲಿದ್ದಾರೆಂಬುದು ಸಮಾಧಾನದ ಸಂಗತಿ! ಪಠ್ಯಕ್ರಮಗಳಲ್ಲಿ ಜ್ಞಾನಕ್ಕಿರುವಷ್ಟೇ ಸ್ಥಾನಮಾನವನ್ನು ನೈತಿಕ ಶಿಕ್ಷಣಕ್ಕೆ ನೀಡಬೇಕು. ನಾವೆಷ್ಟೇ ಸಿರಿವಂತರಾಗಿದ್ದರೂ ನಮ್ಮನ್ನು ರೂಪಿಸುವಲ್ಲಿ, ನಮ್ಮ ಮೇಲೆ ಸಮಾಜದ ಋಣವೊಂದಿದೆ ಎಂಬುದನ್ನು ಹಾಗೂ ಅದನ್ನು ನಮ್ಮ ಶಕ್ತ್ಯಾನುಸಾರವಾಗಿ ತೀರಿಸುವುದರತ್ತ ಪ್ರತಿಯೊಬ್ಬರೂ ಕಾಯಕಗೈಯ್ಯಬೇಕೆನ್ನುವ ಜಾಗೃತಿಯನ್ನು ನಮ್ಮ ಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ ಮೂಡಿಸುವಂತಿರಬೇಕು. ಕೇವಲ ಮಕ್ಕಳಿಗೆ ಜನ್ಮ ನೀಡಿದರೆ ಸಾಲದು; ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ರೂಪಿಸಬೇಕೆಂಬ ನೈತಿಕತೆಯು ಪೋಷಕರಲ್ಲಿ ಮೂಡಬೇಕು. ಹಿರಿಯರಿಗೆ ಗೌರವವೀಯುವ, ಕಿರಿಯರನ್ನು ಆದರಿಸುವ, ನೊಂದವರ ಕಂಬನಿಯೊರೆಸುವ ಹಾಗೂ ಕೌಟುಂಬಿಕ ಹೊಣೆಯನ್ನರಿತು ಅದನ್ನು ನಿಭಾಯಿಸುವುದರ ಮಹತ್ವಗಳನ್ನು ಅವರು ಮಕ್ಕಳಿಗೆ ತಿಳಿಸಿಕೊಡಬೇಕು. ಏಕೆಂದರೆ ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಷ್ಟೇ?

ಇಂಥಾ ಸಂಸ್ಕಾರಯುತವಾದ ವಾತಾವರಣದಲ್ಲಿ ಬೆಳೆದು ದೊಡ್ಡವರಾದ ಮಕ್ಕಳೆಂದೂ ಮುಂದೆ ಲಂಚದ ಹೇಸಿಗೆ ಕಾಸಿಗೆ ಕೈಯ್ಯನ್ನೊಡ್ಡರು; ಸಮಾಜವನ್ನು ವಂಚಿಸಿ ಅರ್ಥಾರ್ಜನೆಗೈಯ್ಯುವ ವಾಮಮಾರ್ಗದಲ್ಲಿ ನಡೆಯರು; ಅಬಲೆಯೊಬ್ಬಳ ಮೇಲೆ ಅತ್ಯಾಚಾರವೆಸಗುವ ಹೀನ ಕೆಲಸಕ್ಕೆ ಕೈಹಾಕರು; ಅವರೆಂದೂ ತಮ್ಮ ತತ್ವವೊಂದೇ ಸತ್ಯವೆಂದು ಬಗೆದು ಇತರರ ಮಂದಿರ–ಮಸೀದಿ–ಚರ್ಚುಗಳನ್ನು ಧ್ವಂಸಗೊಳಿಸುವ ಸಂಕುಚಿತ ಮನೋಭಾವನೆ ತಾಳರು ಹಾಗೂ ಸಾಮಾಜಿಕ ಹಿತಾಸಕ್ತಿಗಳಿಗೆ ಧಕ್ಕೆಯೊದಗಿ ಬಂದಾಗ ಅದನ್ನು ಸರಿಯಾದ ರೀತಿಯಲ್ಲಿ ಪ್ರತಿಭಟಿಸಿ, ಅದಕ್ಕೆ ಸಮರ್ಪಕ ಪರಿಹಾರವನ್ನು ಕಂಡುಕೊಳ್ಳುವರು. ಅಲ್ಲವೇ? ಮಕ್ಕಳಿಗೆ ನೈತಿಕ ಶಿಕ್ಷಣವನ್ನು ನೀಡಿ ಅವರನ್ನು ತೇಜಸ್ವಿಗಳನ್ನಾಗಿಸಿ, ತನ್ಮೂಲಕ ಅದ್ಭುತ ಸತ್ಕಾರ್ಯಗಳನ್ನೆಸಗಬಲ್ಲ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಶ್ರಮಿಸೋಣವೇ?

"ವಿದ್ಯಾರ್ಥಿಗಳು ಭತ್ತವನ್ನು ತುಂಬುವ ಚೀಲಗಳಾಗಬಾರದು; ಅದನ್ನು ಬೆಳೆಯುವ ಗದ್ದೆಗಳಾಗಬೇಕು" ಎಂಬ ಕುವೆಂಪು ಅವರ ನುಡಿ ಮುತ್ತುಗಳನ್ನು ಸ್ಮರಿಸುತ್ತಾ ನಮ್ಮ ಮಕ್ಕಳನ್ನು ಸದೃಢ ಸಮಾಜದ ಆಧಾರ ಸ್ಥಂಭಗಳನ್ನಾಗಿಸುವ ಪಣ ತೊಟ್ಟರೆ ಇಂಥ ಮಕ್ಕಳ ದಿನಾಚರಣೆ ಸಮಾರಂಭಗಳು ಸಾರ್ಥಕವಾದೀತು. ಬನ್ನಿ ಈ ಮಹತ್ಕಾರ್ಯದಲ್ಲಿ ನಾವೆಲ್ಲ ಕೈಜೋಡಿಸೋಣ. ●

# ಅಭಿನಂದನೆ

**ಮಾಧ್ಯಮಿಕ ಶಿಕ್ಷಕ ಸಂಘದ ಸಕ್ರಿಯ ಕಾರ್ಯಕರ್ತರು ನಿವೃತ್ತ ಶಿಕ್ಷಕರು ಆದ ಶ್ರೀಯುತ ಶ್ರೀನಿವಾಸ ಕೆ. ಪಂಚಾರ್ಯ ಅವರಿಗೆ ಇತ್ತೀಚೆಗೆ ಬೆಂಗಳೂರಿನಲ್ಲಿ ರಾಜಾಸ್ಥಾನದ ಸಾಹಿತ್ಯ ಮಂಡಳ ಶ್ರೀನಾಥ ದ್ವಾರ ಸಂಸ್ಥೆಯವರು ಆಯೋಜಿಸದ್ದ 'ಹಿಂದಿ ಲಾವೋ–ದೇಶಬಜಾವೋ' ಕಾರ್ಯಕ್ರಮದಲ್ಲಿ 'ಹಿಂದಿ ಭಾಷಾ ಭೂಷಣ ಸರ್ವೋಚ್ಚ ಮಾನದ ಉಪಾಧಿ' ಹಾಗೂ ಶ್ರೀಮತಿ ರಾಮೇಶ್ವರ ಶಿವಕುಮಾರ ಶಾಸ್ತ್ರಿ ಸ್ಮೃತಿ ಸಮ್ಮಾನವನ್ನು ನೀಡಲಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುತ್ತಿರುವ ಶ್ರೀಯುತರಿಗೆ ಈ ಸಮ್ಮಾನಕ್ಕಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ.**

➢ ಪುಟ 3 ರಿಂದ..... ಕನಕದಾಸ...

ಶ್ರೀಶನ ಭಕುತರ ದೂಷಿಸಿದಾ ಫಲ
ಕಾಸು ಕೊಟ್ಟರೆ ಬಿಟ್ಟೀತೇ

ಭಾಷೆಯ ಕೊಟ್ಟು ನಿರಾಶೆಯಮಾಡಿದ ಫಲ
ಕ್ಲೇಶಗೊಳಿಸದೆ ಬಿಟ್ಟೀತೆ

ಭೂಸುರಸ್ವವ ಹ್ರಾಸ ಮಾಡಿದ ಫಲ
ಏಸೇಸು ಜನುಮಕು ಬಿಟ್ಟೀತೆ.

ನ್ಯಾಯವ ಬಿಟ್ಟನ್ಯಾಯವ ಪೇಳಲು
ನಾಯಿಗೆ ನರಕವು ತಪ್ಪೀತೆ.

ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ಹಾಗಾಗಿ ಇಂದು ಗಳಿಸಿದ ಸಂಪತ್ತನ್ನು ಅಸಹಾಯಕರಿಗೆ ದಾನವಮಾಡಿದರೆ ಮುಂದೆಯೂ ಸುಖವಾಗಿರಬಹುದೆಂದು ದಾನದ ಮಹತ್ವವನ್ನು ತಿಳಿಹೇಳಿದ್ದಾರೆ.

ಇಷ್ಟ ಸಂಪತ್ತನ್ನು ಬಡವರಾ ಕರೆತಂದು
ಕೊಟ್ಟು ಮಾಡಿದ ಪುಣ್ಯಫಲ ತನ್ನದೋ

ಸೃಷ್ಟಿಯೊಳು ಕಾಗಿನೆಲೆಯಾದಿಕೇಶವನಂಘ್ರಿ
ಮುಟ್ಟಿ ಮನದಲಿ ಭಜಿಸೊ ಭ್ರಷ್ಟ ಜೀವನವೆ.

ತೊಂಬತ್ತು ವರ್ಷಗಳ ಕಾಲ ಸುದೀರ್ಘ ಸಾರ್ಥಕ ಜೀವನ ನಡೆಸಿದವರು ಕನಕದಾಸರು. ಅವರು ರಚಿಸಿದ ಕೀರ್ತನೆಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನರ್ಘ್ಯ ಮಾಣಿಕ್ಯಗಳೇ ಸರಿ. ನಿತ್ಯನೂತನತೆಯಿಂದ ಕೂಡಿರುವ ಈ ಕೀರ್ತನೆಗಳು ನಮಗೆ ಮಾರ್ಗದರ್ಶಕಗಳಾಗಿವೆ. ●

➢ ಪುಟ 6 ರಿಂದ..... ಕನ್ನಡ ಜಾಗೃತಿ...

ಸಹಕಾರಿಯಾಗುವ ಹಾಗೆ ನಮ್ಮ ಭಾಷೆಯನ್ನು ಮುಂದಿನ ಪೀಳಿಗೆಗೆ ಆರೋಗ್ಯಕರವಾಗಿ ಕಲಿಸುವ, ಕಲಿಯುವಂತೆ ಮಾಡುವ ಹೊಣೆ ಪ್ರತಿಯೊಬ್ಬ ಕನ್ನಡ ಮಹಿಳೆಯ ಕರ್ತವ್ಯವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಿನ ಶಿಕ್ಷಕರು ಕನ್ನಡ ಪ್ರೇಮದ ಬುನಾದಿಯನ್ನು ಭದ್ರವಾಗಿ ಹಾಕಬೇಕು. ಬಿಡುವಿನ ವೇಳೆಯಲ್ಲಿ ನಾಡಿನ ಇತಿಹಾಸದೊಂದಿಗೆ, ನಾಡು, ನುಡಿಯ ಏಳಿಗೆಗೆ ಶ್ರಮಿಸಿದವರ ವಿಚಾರ, ಅದರ ಪ್ರತಿಫಲವನ್ನು ತಿಳಿಯವಂತೆ ಪ್ರೇರೇಪಿಸಬೇಕು. ಮಹಿಳಾ ಬರಹಗಾರರು ಕೂಡ ಇಂತಹ ಕಾರ್ಯವನ್ನು ತಮ್ಮ ಬರವಣಿಗೆಯ ಮೂಲಕ ಮಾಡಬೇಕು. ಕನ್ನಡ ನೆಲದಲ್ಲಿ ಅರಳಿದ ಕನ್ನಡದ ಪ್ರತಿಭೆಗಳ ಪರಿಚಯವು ಯುವಜನಾಂಗಕ್ಕೆ ಆಗಬೇಕು. ಕನ್ನಡ ಭಾಷೆಯನ್ನು, ಕನ್ನಡದ ಸಂಸ್ಕೃತಿಯನ್ನು ಉಳಿಸುವ ಇಂತಹ ಕಾರ್ಯಗಳನ್ನು ಅನುಷ್ಠಾನಕ್ಕೆ ತಂದರೆ ಆಗ ಮಾತ್ರ ಕನ್ನಡ ರಾಜ್ಯೋತ್ಸವದ ಆಚರಣೆಗೆ ಒಂದು ಅರ್ಥಬರುತ್ತದೆ. ●

**ಧೈರ್ಯಶಾಲಿಯ ಕೃತಿಯೇ ಪುಷ್ಪ**
**ಅದು ಸೂಸುವ ಪರಿಮಳವೇ ಕೀರ್ತಿ.**

➢ ಪುಟ 4 ರಿಂದ..... ಭಾಷಾ ಪರಿಕಲ್ಪನೆ....

ಸೀಮಿತ. ಸರಿಯಾದ ನಾಡುಗಳಲ್ಲಿ ಈ ಕಾರಣದಿಂದಲೇ ಶಿಕ್ಷಣ ಸಂಸ್ಥೆಗಳು ಬರಿಯ ಸರ್ಕಾರದ್ದಾಗಿದ್ದು ಉಚಿತವಾಗಿರುತ್ತದೆ. ಇಂತಹ ವ್ಯವಸ್ಥೆಯಾಗಬೇಕಾಗಿದ್ದ ನಮ್ಮ ನಾಡಿನ ಶಿಕ್ಷಣ ಕ್ಷೇತ್ರ, ನಿಧಾನವಾಗಿ ಖಾಸಗಿ ಉದ್ಯಮವಾಗಿದ್ದೂ.. ಇದನ್ನು ನ್ಯಾಯಾಲಯವೂ ಉದ್ಯಮವಾಗಿ ಪರಿಗಣಿಸಿದ್ದು ವಿಚಿತ್ರವಾದ ಸತ್ಯವಾಗಿದೆ! ನ್ಯಾಯಾಲಯಗಳು ಶಾಲೆ ನಡೆಸುವುದನ್ನು ಉದ್ಯಮವೆಂದದ್ದೂ, ಹಾಗಾಗಿ ಖಾಸಗಿ ಶಾಲೆಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವಿಲ್ಲಾ ಎನ್ನುವ ನಿಲುವನ್ನು ತೆಗೆದುಕೊಂಡಿರುವುದೂ ನಮ್ಮ ಸರ್ಕಾರದ ಅಸಮರ್ಪಕ ಕಾನೂನು ಹೋರಾಟಕ್ಕೆ ಕನ್ನಡಿಯಾಗಿದೆ.

ವಾಸ್ತವವಾಗಿ ರಾಜ್ಯದಲ್ಲಿರುವ 75% ಕನ್ನಡ ಶಾಲೆಗಳ ಮೇಲಾಗಲೀ, 8–10% ಪರಭಾಷಾ ಮಾಧ್ಯಮದ ಶಾಲೆಗಳ ಮೇಲಾಗಲೀ ನೇರವಾಗಿ ಈ ತೀರ್ಪು ಪರಿಣಾಮ ಬೀರದು. ಅಲ್ಲೆಲ್ಲಾ ಸರ್ಕಾರದ ಭಾಷಾನೀತಿಯೇ ಮುಂದುವರೆಯಲಿದೆ. ಆದರೆ ಖಾಸಗಿ ಶಾಲೆಗಳು ಸರ್ಕಾರದ ಎಲ್ಲಾ ನಿಯಂತ್ರಣಗಳಿಂದ ಮುಕ್ತವಾಗಲಿವೆ ಮತ್ತು ಸರ್ಕಾರಕ್ಕೆ ತನ್ನ ನಾಡಿನ ಕಲಿಕೆಯ ಏರ್ಪಾಟನ್ನು ಕಟ್ಟಿ, ನಿರ್ವಹಿಸುವುದರ ಮೇಲಿನ ಹಿಡಿತ ಸಡಿಲವಾಗಲಿದೆ. ಶಾಲೆಗಳನ್ನು ತೆರೆಯುತ್ತೇವೆ ಎನ್ನುವವರಿಗೆ ಅನುಮತಿ ನೀಡುವುದನ್ನು ಬಿಟ್ಟು ಯಾವ ಹಿಡಿತವೂ ಸರ್ಕಾರಕ್ಕೆ ಇರುವುದಿಲ್ಲವಾದ್ದರಿಂದ ಲೆಕ್ಕವಿಲ್ಲದಂತೆ ಶಾಲೆಗಳ ಹೆಸರಲ್ಲಿ ಖಾಸಗಿ ಸುಲಿಗೆ ಕೇಂದ್ರಗಳು ಶುರುವಾಗಬಹುದು. ಇಂತಹ ಸಂದರ್ಭದಲ್ಲಿ ನಮ್ಮ ನಾಡಿನ ಜನರಲ್ಲೂ ಇಂಗ್ಲೀಷ್ ಮಾಧ್ಯಮದ ಬಗ್ಗೆ ಒಲವು ಉಕ್ಕುತ್ತಿರುವಾಗ ನ್ಯಾಯಾಲಯವು ಕನ್ನಡ ಮಾಧ್ಯಮದ ಪರವಾಗಿ ತೀರ್ಪು ನೀಡಿದ್ದರೂ ಜನರಿಂದ ವಿರೋಧ ಎದುರಿಸಬೇಕಾಗುತ್ತಿತ್ತು ಎನ್ನುವುದನ್ನು ಅಲ್ಲಗಳೆಯಲಾಗದು. ಹಾಗಾದಲ್ಲಿ ಮುಂದಿನ ದಾರಿಯೇನು?

ಈಗಿರುವ ಕನ್ನಡ ಮಾಧ್ಯಮದ ಶಾಲೆಗಳನ್ನು ಸೌಕರ್ಯ, ಅನುಕೂಲತೆ, ಕಲಿಕೆಯ ಗುಣಮಟ್ಟದ ದೃಷ್ಟಿಯಲ್ಲಿ ಅತ್ಯುತ್ತಮ ಗೊಳಿಸಬೇಕು. ಕನ್ನಡದಲ್ಲಿ ಎಲ್ಲಾ ಹಂತದ ಕಲಿಕೆಯನ್ನೂ, ಕಲಿಕೆಯ ಎಲ್ಲಾ ವಿಭಾಗಗಳನ್ನೂ ತರಬೇಕು. ಇಂತಹ ಏರ್ಪಾಟಿನಲ್ಲಿ ಕಲಿಯುವುದರಿಂದ ನಮ್ಮ ಮಕ್ಕಳ ನಾಳೆಗಳು ಅತ್ಯುತ್ತಮವಾಗುತ್ತದೆ ಎನ್ನುವಂತಹ ಗುಣಮಟ್ಟದ ಕಲಿಕೆಯನ್ನು ಕನ್ನಡದಲ್ಲಿ ತರುವ ಮೂಲಕ ಜಗತ್ತೆಲ್ಲಾ ಅರಿತಿರುವ 'ತಾಯ್ನುಡಿ ಕಲಿಕೆಯೇ ಅತ್ಯುತ್ತಮ' ಎನ್ನುವ ಏರ್ಪಾಟನ್ನು ಕಟ್ಟಿಕೊಳ್ಳಬೇಕು. ಇದೊಂದೇ ಇರುವ ದಾರಿ. ತಾಯ್ನುಡಿಯಲ್ಲಿ ಉನ್ನತ ಕಲಿಕೆಯನ್ನೂ ಮಾಡಲು ಸಾಧ್ಯವಾಗಿಸುವುದರ ಮೂಲಕ ಅತ್ಯುತ್ತಮ ಕಲಿಕೆಯನ್ನೂ, ಹೊರನಾಡುಗಳ ಭಾಷೆಗಳಾದ ಇಂಗ್ಲೀಷ್, ಜಪಾನೀಸ್, ಜರ್ಮನ್, ಫ್ರೆಂಚ್ ಮೊದಲಾದವನ್ನು ಕಲಿಸುವ ಏರ್ಪಾಟಿನ ಮೂಲಕ ಹೊರಜಗತ್ತಿನಲ್ಲಿ ಗೆಲ್ಲಬಲ್ಲ ಸತ್ವವನ್ನೂ ತಂದುಕೊಡುವ ಕಲಿಕೆಯ ಏರ್ಪಾಟನ್ನು ಕಟ್ಟಿ ಕೊಳ್ಳಬೇಕಾದ ಬದ್ಧತೆಯನ್ನು ರಾಜ್ಯಸರ್ಕಾರ ತೋರಬೇಕಾಗಿದೆ. ಸರ್ಕಾರಕ್ಕಿಂತಲೂ ಹೆಚ್ಚಿನ ಬದ್ಧತೆಯನ್ನು ಕನ್ನಡ ಸಮಾಜ ಹಾಗೂ ಕನ್ನಡ ಜನತೆ ತೋರಬೇಕಾಗಿದೆ. ●

# ಗಾಂಧೀಜಿ ಕಂಡ ಭಾರತಮಾತೆ



ಡಿಸೆಂಬರ್ 1924 ಬೆಳಗಾವಿಯಲ್ಲಿ ಕಾಂಗ್ರೆಸ್ಸಿನ ರಾಷ್ಟ್ರೀಯ ಅಧಿವೇಶನ, ಗಾಂಧೀಜೀಯವರ ಅಧ್ಯಕ್ಷತೆಯಲ್ಲಿ ನಡೆದ ಒಂದೇ ಒಂದು ಅಧಿವೇಶನ. ಅದು ರಾಜಕೀಯ ಚರ್ಚೆಗಳೊಡನೆ ಸಂಗೀತ ನಾಟಕಗಳೂ ಅಲ್ಲಿದ್ದವು. ಭಾರತಮಾತಾ ಎಂಬ ನಾಟಕವೊಂದು ಅಲ್ಲಿ ಪ್ರದರ್ಶನಗೊಳ್ಳುವುದಿತ್ತು. ಅದರಲ್ಲಿ ಹುಬ್ಬಳಿಯ 13 ವರ್ಷದ ಹುಡುಗಿಯೊಬ್ಬಳದು ಭಾರತಮಾತೆಯ ಪಾತ್ರ. ಆಕೆಯ ಅಧ್ಯಾಪಕಿ ಬರೆದು ಕಲಿಸಿದ ನಾಟಕ ಅದು.

ನಾಟಕ ಆಡುವ ಮಕ್ಕಳು, ಆಡಿಸುವ ಆ ಅಧ್ಯಾಪಕಿ– ಎಲ್ಲರಲ್ಲೂ ಒಂದು ರೀತಿಯ ಭಯಮಿಶ್ರಿತ ಆನಂದ. ನಾಟಕ ನೋಡಿ ಗಾಂಧಿಜೀಯವರು ಏನೆಂದಾರು ಎಂಬ ಭಯ ಒಂದೆಡೆ. ಸ್ವತಃ ಗಾಂಧಿಜೀಯ ಎದುರೇ ನಾಟಕ ಆಡುವ ಉತ್ಸಾಹ –ಸಂಭ್ರಮ ಇನ್ನೊಂದೆಡೆ.

ಆ ನಾಟಕದ ಕಥಾವಸ್ತು ಗಾಂಧೀಜಿಯವರಿಗೇ ಸಂಬಂಧಿಸಿದ್ದಾಗಿತ್ತು. ದಕ್ಷಿಣ ಆಫ್ರಿಕೆಯಿಂದ ಗಾಂಧೀಜಿ ಭಾರತಕ್ಕೆ ವಾಪಾಸಾಗುತ್ತಿದ್ದಾಗ ಓರ್ವ ಹೆಂಗಸು ಎದುರಾದಳು. ಆಕೆಯ ದೀನ ಮುಖವನ್ನು ಕಂಡು ಗಾಂಧಿಜಿ ಆಕೆಯ ಕಷ್ಟಗಳನ್ನು ವಿಚಾರಿಸಿದರು. ಆಕೆ ಅಳುತ್ತಲೇ ‘ಕೋಟ್ಯಂತರ ಮಕ್ಕಳನ್ನು ಹೆತ್ತ ನನ್ನ ಗೋಳನ್ನು ಕೇಳುವವರೇ ಇಲ್ಲ. ವಿದೇಶಿಯರು ನನ್ನನ್ನು ದಾಸಿಯನ್ನಾಗಿ ಮಾಡಿದ್ದಾರೆ. ಮಗೂ ನನ್ನ ದಾಸ್ಯದ ನೊಗವನ್ನು ಕಿತ್ತೆಸೆಯುವೆಯಾ? ಎನ್ನುತ್ತಾಳೆ. ಆಕೆಯ ಮಾತು ಕೇಳಿ ಗಾಂಧಿಜೀಗೆ ಕಣ್ಣಂಚಿನಲ್ಲಿ ನೀರು ಬಂತು. ಆಕೆ ಬೇರಾರೂ ಅಲ್ಲ ಭಾರತಮಾತೆ ಎಂದು ತಕ್ಷಣ ಗ್ರಹಿಸಿದ ಗಾಂಧೀಜಿ ಅಮ್ಮಾ ನಿನ್ನ ಕೋರಿಕೆಯನ್ನು ನಾನು ಈಡೇರಿಸುವೆ ಎಂದು ಭಾಷೆ ಕೊಡುತ್ತಾರೆ. ಇದೇ ಆ ನಾಟಕದ ಕಥಾವಸ್ತು. ಅಭಿನಯವೂ ಚೆನ್ನಾಗಿತ್ತು. ಎಲ್ಲರಿಗೂ ನಾಟಕ ಮೆಚ್ಚುಗೆಯಾಯಿತು.

ನಾಟಕ ಮುಗಿಯಿತು. ಕಲಾವಿದರೆಲ್ಲ ಗಾಂಧಿಜೀಯವರ ಆಶೀರ್ವಾದ ಪಡೆಯಲು ಬಂದರು. ಭಾರತಮಾತೆಯ ಪಾತ್ರದಾರಿ ಬಾಲಕಿ ಪದ್ಮಾವತಿ ಗಾಂಧೀಜಿಯ ಕಾಲಿಗೆರಗುವಷ್ಟರಲ್ಲಿ ತಕ್ಷಣ ಮೇಲೆತ್ತಿದ ಅವರು ಆಕೆಗೇ ನಮಸ್ಕರಿಸಿದರು. ‘ಅಮ್ಮಾ’ ನೀನೇ ಭಾರತಮಾತೆ, ನಾಟಕದಲ್ಲಿ ಕೊಟ್ಟ ಭಾಷೆಯಂತೆ ನಡೆಯುತ್ತೇನೆ’ ಎಂದು ಭಾವುಕರಾಗಿ ನುಡಿದರು. ಎಲ್ಲರೂ ಅಚ್ಚರಿಯಿಂದ ನೋಡುತ್ತಿದ್ದರು. ಯಾರ ಬಾಯಲ್ಲೂ ಮಾತೆ ಹೊರಡಲಿಲ್ಲ.

ಭಾರತಮಾತೆಯ ವೇಷದ ಬಾಲಕಿಯಲ್ಲಿ ಗಾಂಧೀಜಿ ಸಾಕ್ಷಾತ್ ಭಾರತಮಾತೆಯನ್ನೇ ಕಂಡಿದ್ದರು!

## ಶಿಕ್ಷಕನಾಗಿದ್ದ ಗಾಂಧೀಜಿ

ಶಿಕ್ಷಣ ಎಂದರೆ ಶಾಲೆಯಲ್ಲೇ ಆಗಬೇಕೆಂದೇನೂ ಇಲ್ಲ. ಶಾಲಾ ಶಿಕ್ಷಣದಲ್ಲಿ ಒಂದು ತಲೆಯಿಂದ ಹಲವಕ್ಕೆ ಕೇವಲ ಬಹಳಷ್ಟು ಮಾಹಿತಿಯನ್ನು ತಲುಪಿಸುವುದಷ್ಟೇ ಆಗಿರುತ್ತದೆ. ಆದರೆ ಮಹಾತ್ಮರು ತಮ್ಮ ಜೀವನದ ಮೂಲಕ, ಆಚರಣೆಯ ಮೂಲಕ ತಮ್ಮ ಬಳಿ ಬಂದವರಿಗೆ ಜೀವನ ಶಿಕ್ಷಣ ನೀಡುತ್ತಾರೆ ಅದೇ ನಿಜವಾದ ಶಿಕ್ಷಣ, ಶಾಶ್ವತ ಶಿಕ್ಷಣ.

ಗಾಂಧೀಜಿ ಕೂಡ ಅಂತಹ ಮೌಲ್ಯ ಶಿಕ್ಷಣ ತಜ್ಞರಾಗಿದ್ದರು. ಈ ಕೆಳಗಿನ ಘಟನೆ ಅದನ್ನು ನಿರೂಪಿಸುತ್ತವೆ.

ಗಾಂಧೀಜೀಯವರ ಸೇವಾಶ್ರಮದಲ್ಲಿ ವಿದೇಶೀ ಶಿಕ್ಷಿತ ವೈದ್ಯನೊಬ್ಬ ಅವರ ಸಹಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ. ಅದೊಮ್ಮೆ ಓರ್ವ ಮಹಿಳೆ ವಿಪರೀತ ಹೊಟ್ಟೆ ನೋವೆಂದು ಆಶ್ರಮಕ್ಕೆ ಬಂದು ತನ್ನ ನೋವನ್ನು ಏನಾದರೂ ಮಾಡಿ ಪರಿಹರಿಸಿ ಎಂದು ಗಾಂಧೀಜಿಯವರಲ್ಲಿ ಬೇಡಿಕೊಂಡಳು. ಅವರ ಸ್ಥಿತಿಗತಿಯಿಂದ ಅವಳೋರ್ವ ತೀರ ಬಡವಳೆಂದು ಗಾಂಧೀಜಿಯವರ ಅರಿವಿಗೆ ಬಂತು. ಕೂಡಲೇ ತಮ್ಮ ಸಹಕಾರಿ ವೈದ್ಯನನ್ನು ಕರೆದು ಆಕೆಗೆ ಬೇವಿನ ಸೊಪ್ಪು ಹಾಗೂ ಒಂದು ಲೋಟ ಮಜ್ಜಿಗೆ ಒದಗಿಸುವಂತೆ ತಿಳಿಸಿದರು. ಎಷ್ಟೋ ಸಮಯದ ನಂತರ ವೈದ್ಯನಿಗೆ ಹೇಳಿ ಕಳಿಸಿ, ಆತ ಬಂದ ತಕ್ಷಣ ಆ ರೋಗಿಯ ಸ್ಥಿತಿ ಏನಾಯಿತೆಂದು ವಿಚಾರಿಸಿದರು.

ವೈದ್ಯ– ನಾನಾಕೆಗೆ ನೀವು ಹೇಳಿದಂಥ ಔಷಧಿಯ ಬಗ್ಗೆ ತಿಳಿಸಿರುವೆನು ಗಾಂಧೀಜಿ

ಗಾಂಧೀಜಿ– ಆಕೆ, ಆ ಔಷಧವನ್ನು ತೆಗೆದುಕೊಂಡಳೇ?

ವೈದ್ಯ– ಈ ವೇಳೆಗೆ ಆಕೆ ತೆಗೆದುಕೊಂಡು ಗುಣಮುಖಳಾಗಿರಬಹುದು.

ಗಾಂಧೀಜಿ– ಆಕೆ ಗುಣಮುಖಳಾಗಿರುವುದನ್ನು ನೀನು ಖಾತ್ರಿ ಮಾಡಿಕೊಂಡೆಯಾ?

ವೈದ್ಯ– ಇಲ್ಲ

ಗಾಂಧೀಜಿ – ಸರಿ ನಡಿ ಕೂಡಲೇ ಆಕೆಯ ಮನೆ ಹುಡುಕಿಕೊಂಡು ಹೋಗೋಣ ಎಂದು ವೈದ್ಯನನ್ನೂ ಕರೆದುಕೊಂಡು ಆಕೆಯ ಗುಡಿಸಿಲಿಗೆ ಹೋದರು. ಅಲ್ಲಿ ಆಕೆ ನರಳುತ್ತಾ ಮಲಗಿರುವುದನ್ನು ಕಂಡು ಏನಮ್ಮಾ ವೈದ್ಯರು ಹೇಳಿದ ಔಷಧಿ ತೆಗೆದುಕೊಂಡೆಯಾ? ಎಂದು ಪ್ರಶ್ನಿಸಿದರು.

ಆಕೆ ‘ಬೇವಿನ ಸೊಪ್ಪು ಬಾಯಲ್ಲಿ ಅಗಿದೆ, ಆದರೆ ಮಜ್ಜಿಗೆ ಕುಡಿಯಲಿಲ್ಲ ಎಂದು ಉತ್ತರಿಸಿದಳು.

ಗಾಂಧೀಜಿ ಮಜ್ಜಿಗೆ ಯಾಕಮ್ಮಾ ಕುಡಿಯಲಿಲ್ಲ ಎಂದು ಕೇಳಿದಾಗ ಆಕೆ ಲೋಟ ಮಜ್ಜಿಗೆ ಕೊಳ್ಳಲು ನನ್ನ ಬಳಿ ಕಾಸಿಲ್ಲ ಎಂದು ಉತ್ತರಿಸಿದಾಗ ಗಾಂಧೀಜಿಗೆ ತುಂಬಾ ದುಃಖವಾಯಿತು. ಕೂಡಲೇ ಅ ವೈದ್ಯನಿಗೆ ಅಪ್ಪಾ ವೈದ್ಯರ ಕರ್ತವ್ಯವೆಂದರೆ ತನ್ನ ರೋಗಿ ಪೂರ್ಣಗುಣಮುಖಳಾಗುವವರೆಗೆ ಅವರ ಸೇವೆ ಮಾಡುವುದು. ನೀನೇಕೆ ಆಕೆಗೆ ಆಶ್ರಮದಲ್ಲೇ ಒಂದು ಲೋಟ ಮಜ್ಜಿಗೆ ಕೊಡಿಸಲಿಲ್ಲ. ನಿನ್ನ ಬಳಿಯೂ ಹಣ ಇರಲಿಲ್ಲವೇ? ನೀನು ಒಳ್ಳೆಯ ವೈದ್ಯ ನೆನೆಸಿಕೊಳ್ಳಬೇಕಾದರೆ ಈಗಿಂದೀಗಲೇ ಹಣ ಕೊಟ್ಟು ಮಜ್ಜಿಗೆ ಕೊಂಡು ಆಕೆಗೆ ಕುಡಿಸು ಎಂದು ಆಗ್ರಹಿಸಿದರು.

ಅಂದು, ಆ ವೈದ್ಯ ತನ್ನ ಜೀವನದಲ್ಲೊಂದು ಪಾಠ ಕಲಿತ.

ವಂದೇ ಮಾತರಂ..

ಹೆಚ್. ನಾಗಭೂಷಣ ರಾವ್
ನಿವೃತ್ತ ಅಧ್ಯಾಪಕ
ನ್ಯಾಷನಲ್ ಹೈಸ್ಕೂಲ್
ಬೆಂಗಳೂರು



Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-10-2017 Date of Posting 20th or 21st of every month

# ಕೇಂದ್ರ ಸಚಿವರಾದ ಮಾನ್ಯ ಶ್ರೀ ಪ್ರಕಾಶ್ ಜಾವ್ಡೇಕರ್ ಅವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವಿವಿಧ ಜಿಲ್ಲಾ ಘಟಕಗಳು ಶೈಕ್ಷಣಿಕ ಬೇಡಿಕೆಗಳ ಬಗ್ಗೆ ಸಲ್ಲಿಸಿದ ಮನವಿ



ಕ.ರಾ.ಮಾ.ಶಿ.ಸಂಘದ ಪದಾಧಿಕಾರಿಗಳು ಕೇಂದ್ರ ಸಚಿವರಿಗೆ ಮನವಿ ಸಲ್ಲಿಸುತ್ತಿರುವುದು



ಗುಲ್ಬರ್ಗಾ ಜಿಲ್ಲಾ ಘಟಕದಿಂದ ಕೇಂದ್ರ ಸಚಿವರಿಗೆ ಮನವಿ



ಜಿಲ್ಲಾಧಿಕಾರಿಗಳ ಮೂಲಕ ಬೀದರ್ ಜಿಲ್ಲಾ ಘಟಕದ ಮನವಿ



ಜಿಲ್ಲಾಧಿಕಾರಿಗಳ ಮೂಲಕ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಗಳಿಂದ ಮನವಿ

**ಗಮನಿಸಿ :** ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

### ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು



srushtidesigns@gmail.com